# ನವವರ್ಷಗಳಲ್ಲಾದ

## ಸಾಧನೆ, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ

### 9 ವರ್ಷಗಳ ಸಾಧನೆಯ ಶಿಖರದತ್ತ...!





9 ವರ್ಷಗಳು

1. **3000 ಕೋಟಿ**ಯಲ್ಲಿ 12 ರಾಷ್ಟ್ರೀಯ ಹೆದ್ದಾರಿಗಳು
2. **1100 ಕೋಟಿ** ಪರಿಹಾರ/ಪ್ರೋತ್ಸಾಹ ಧನ, ಫಸಲ್ ಬಿಮಾ, ಪಿ.ಎಮ್. ಕಿಸಾನ್ ಸಮ್ಮಾನ್ ಅಡಿಯಲ್ಲಿ ಜಮೆ
3. **1392 ಕೋಟಿ** ಅನುದಾನದಲ್ಲಿ ಬೀದರ್ ಕಲಬುರಗಿ ರೈಲ್ವೆ ಕಾಮಗಾರಿ ಪೂರ್ಣ ಹಾಗೂ 13 ಹೊಸ ರೈಲುಗಳ ಪ್ರಾರಂಭ
4. ಬೀದರ್‌ನಿಂದ ನಾಗರಿಕ **ವಿಮಾನಯಾನ** ಪ್ರಾರಂಭ
5. **1577 ಕೋಟಿ** ಅನುದಾನದ ನೀರಾವಾರಿ ಯೋಜನೆಗಳು ಮಂಜೂರಿ
6. ಉಜ್ವಲ್ ಮೂಲಕ **3.5 ಲಕ್ಷ** ಮಹಿಳೆಯರಿಗೆ ಉಚಿತ ಗ್ಯಾಸ್
7. **35 ಲಕ್ಷ** ಉಚಿತ ಕೋವಿಡ್ ಲಸಿಕೆ ನೀಡಿ, ಜನತೆಯ ಜೀವ ರಕ್ಷಿಸಲಾಗಿದೆ
8. **15 ಲಕ್ಷ** ಜನರಿಗೆ ಪ್ರತಿ ತಿಂಗಳು ಉಚಿತ ಪಡಿತರ
9. **1 ಲಕ್ಷ** ಗರ್ಭಿಣಿಯರಿಗೆ **5000** ಪ್ರೋತ್ಸಾಹ ಧನ, **3 ಲಕ್ಷ** ಶೌಚಾಲಯ

Download E-book

## ಭಗವಂತ ಖೂಬಾ

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ
ಹೊಸ ಮತ್ತು ನವೀಕರಿಸಬಹುದಾದ ಇಂಧನ ಮೂಲ ಖಾತೆ ಸಹ ಸಚಿವರು

bhagwanthkhuba

bhagwantkhuba

90 90 90 2024

ಜನ ಸಂಪರ್ಕ ಅಭಿಯಾನದಲ್ಲಿ ಪಾಲ್ಗೊಳ್ಳಲು ಮಿಸ್ಡ್ ಕಾಲ್ ನೀಡಿ

# ರಾಷ್ಟ್ರ ಹಿತಕ್ಕಾಗಿ ನುಡಿಗಳು

"2022–23 GDP ಬೆಳವಣಿಗೆಯ ಅಂಕಿ ಅಂಶಗಳು ಜಾಗತಿಕ ಸವಾಲುಗಳ ನಡುವೆ ಭಾರತೀಯ ಆರ್ಥಿಕತೆಯ ಸ್ಥಿತಿಸ್ಥಾಪಕತ್ವವನ್ನು ಒತ್ತಿ ಹೇಳುತ್ತವೆ. ಒಟ್ಟಾರೆ ಆಶಾವಾದ ಮತ್ತು ಬಲವಾದ ಸ್ಥೂಲ-ಆರ್ಥಿಕ ಸೂಚಕಗಳ ಜೊತೆಗೆ ಈ ದೃಢವಾದ ಕಾರ್ಯಕ್ಷಮತೆಯು ನಮ್ಮ ಆರ್ಥಿಕತೆಯ ಭರವಸೆಯ ಪಥವನ್ನು ಮತ್ತು ನಮ್ಮ ಜನರ ಸ್ಥಿರತೆಗೆ ಉದಾಹರಣೆಯಾಗಿದೆ."

- **ಸನ್ಮಾನ್ಯ ಶ್ರೀ ನರೇಂದ್ರ ಮೋದಿ**
ಪ್ರಧಾನಮಂತ್ರಿಗಳು, ಭಾರತ ಸರ್ಕಾರ

ಭಾರತದ ಪ್ರಸ್ತುತ GDP ವಾರ್ಷಿಕ ಬೆಳವಣಿಗೆ ದರ **7.2%**

"ಭಾರತವು ಇದೀಗ ಹೆಚ್ಚಿನ ಬೆಳವಣಿಗೆ ದರದೊಂದಿಗೆ ಜಾಗತಿಕ ಆರ್ಥಿಕತೆಯ ಪ್ರಕಾಶಮಾನವಾದ ತಾಣಗಳಲ್ಲಿ ಒಂದಾಗಿದೆ."

- **ಡೇನಿಯಲ್ ಲೇಘ್**
ಅಂತಾರಾಷ್ಟ್ರೀಯ ಹಣಕಾಸು ನಿಧಿ ವಿಭಾಗದ ಮುಖ್ಯಸ್ಥರು

ಭಾರತದಲ್ಲಿ ವಾರ್ಷಿಕ ಹಣದುಬ್ಬರ ದರ **4.25%**

"ಕೋವಿಡ್ ಸಮರ್ಥ ನಿರ್ವಹಣೆಗಾಗಿ ಮೋದಿ ಸರ್ಕಾರ ಕೈಗೊಂಡ ನೀತಿ ಹಾಗೂ ಕ್ಷಿಪ್ರ ಕ್ರಮಗಳಿಂದಾಗಿ ಭಾರತದ ಆರೋಗ್ಯ ಕ್ಷೇತ್ರ ಇಂದು ವಿಶ್ವಕ್ಕೇ ಮಾದರಿಯಾಗಿದೆ. ವರ್ಲ್ಡ್ ಬ್ಯಾಂಕ್‌ನ "ಭಾರತದ ಕೋವಿಡ್ ನಿರ್ವಹಣೆ: ಸವಾಲು, ಆವಿಷ್ಕಾರ, ಪಾಠ" ಎಂಬ ಅಧ್ಯಯನ ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ."

- **ವಿಶ್ವಬ್ಯಾಂಕ್**

## ಶ್ರೀ ನರೇಂದ್ರ ಮೋದಿ ಅವರ ಪ್ರಮುಖ 9 ನಿರ್ಧಾರಗಳು

- ಕಾಶ್ಮೀರ 370ನೇ ವಿಧಿ ರದ್ದು
- ಬ್ರಿಟಿಷ್ ಕಾಲದ ಕಾನೂನು ರದ್ದು
- ಸಶಸ್ತ್ರ ಸೇನಾ ದಂಡನಾಯಕರ ನೇಮಕ
- ರೂ. 500, ರೂ. 1000 ನೋಟ್ ಬ್ಯಾನ್
- ಹಲವು ಬ್ಯಾಂಕ್ ವಿಲೀನ ಪ್ರಕ್ರಿಯೆ
- ತ್ರಿವಳಿ ತಲಾಖ್ ಪದ್ಧತಿ ನಿಷೇಧ
- ಸಿಎಎ ಕಾಯ್ದೆ ಅಂಗೀಕಾರ
- ರಾಷ್ಟ್ರೀಯ ಶಿಕ್ಷಣ ನೀತಿ
- ಏಕರೂಪದ ತೆರಿಗೆ ಜಿಎಸ್‌ಟಿ





# ಮನದಾಳದ ಮಾತು

ಪ್ರೀತಿಯ ಮಹಾಜನತೆ, ನಿಮ್ಮ ಮಗನಾಗಿ, ಸಹೋದರನಾಗಿ ನನಗೆ ತಾವುಗಳು ನೀಡಿರುವ ಪ್ರೀತಿಗೆ ನಾನು ಸದಾ ಅಭಾರಿಯಾಗಿದ್ದೇನೆ, ಜೊತೆಗೆ ಈ 9 ವರ್ಷಗಳಲ್ಲಿ ಭಾರತವು ವಿಶ್ವದ ಮುಂದೆ ಯಾವ ಸ್ಥಾನದಲ್ಲಿದೆ, ನಮ್ಮ ಆರ್ಥಿಕತೆ, ಅಭಿವೃದ್ಧಿಗಳು ಎಷ್ಟರ ಮಟ್ಟಿಗೆ ಆಗಿವೆ ಹಾಗೂ ಆಗುತ್ತಿವೆ ಎಂದು ನನ್ನ ಮನದಾಳದ ಮಾತಿನ ಮೂಲಕ ತಮ್ಮ ಮುಂದೆ ಇಡುತ್ತಿದ್ದೇನೆ.

ನಮ್ಮ ಭಾರತವು ಇಂದು ವಿಶ್ವಕ್ಕೆ ಗುರುವಾಗಿ ನಿಂತಿದೆ, ವಿದೇಶಗಳಿಗೆ ಲಸಿಕೆಗಳು ಕಳುಹಿಸುವಷ್ಟು ದೊಡ್ಡ ಮಟ್ಟಕ್ಕೆ ಬೆಳೆದಿದೆ, ದೊಡ್ಡಣ್ಣ ಎಂದೆನಿಸಿಕೊಂಡಂತಹ ದೇಶಗಳು, ಇಂದು ನಮ್ಮ ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜಿಯವರನ್ನು ಗೌರವದಿಂದ ತಮ್ಮ ದೇಶಗಳಿಗೆ ಅಹ್ವಾನಿಸುತ್ತಾರೆ ಹಾಗೂ ಸ್ವಾಗತಿಸುತ್ತಾರೆ. ಅಂತರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಜೊತೆ ನಿಲ್ಲಲು ಬಯಸುತ್ತಾರೆ ಇದು ನಮ್ಮ ಸ್ವಾತಂತ್ರ್ಯ ಸೇನಾನಿಗಳು, ನಮ್ಮ ಪೂರ್ವಜರು ಹಾಗೂ ನಾವೆಲ್ಲರೂ ಬಯಸಿದ್ದ ಭಾರತ.

ನನ್ನ ಸಾಮರ್ಥ್ಯಕ್ಕೆ, ನನ್ನ ಕಾರ್ಯನಿಷ್ಠೆಯನ್ನು ಮನಗೊಂಡು ಮೋದಿಜಿಯವರು ಇಂದು ಕೇಂದ್ರ ಸಚಿವನಾಗಿ ಮಾಡಿ ರಾಷ್ಟ್ರದ ಸೇವೆಯನ್ನು ಮಾಡುವ ಜವಾಬ್ದಾರಿಯೂ ನೀಡಿದ್ದಾರೆ. ನನ್ನ ತನುಮನದಿಂದ ಸಚಿವಾಲಯದ ಕೆಲಸ ಮಾಡಿ ರಾಷ್ಟ್ರಹಿತಕ್ಕಾಗಿ ನನ್ನ ಒಳ್ಳೆಯ ಕಾರ್ಯಗಳು ಮಾಡುತ್ತಿದ್ದೇನೆ. ಪ್ರಧಾನಿಗಳ ಮತ್ತು ಎಲ್ಲಾ ಸಚಿವರ ಮನಗೆದ್ದಿದ್ದೇನೆ ಎಂದು ತಿಳಿಸಲು ಸಂತೋಷವಾಗುತ್ತದೆ.

**ಭಾರತದಲ್ಲಿ ಒಕ್ಕೂಟ ವ್ಯವಸ್ಥೆ ಇರುವ ಕಾರಣ ಕೇಂದ್ರ ಸರ್ಕಾರವು ಯೋಜನೆಗಳು ರೂಪಿಸಿ, ಅದಕ್ಕೆ ಬೇಕಾಗುವಷ್ಟು ಅನುದಾನ ರಾಜ್ಯ ಸರ್ಕಾರಕ್ಕೆ ಒದಗಿಸಿ, ರಾಜ್ಯ ಸರ್ಕಾರದ ಮೂಲಕ ಕೇಂದ್ರದ ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತದೆ. ಹೀಗಾಗಿ ಕ್ಷೇತ್ರದಲ್ಲಿ ಅನೇಕ ಕೇಂದ್ರ ಪುರಸ್ಕೃತ ಯೋಜನೆಗಳು ಸಂಬಂಧಪಟ್ಟ ಇಲಾಖೆಗಳ ಮೂಲಕ ಹಾಗೂ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.**

ತಮ್ಮೆಲ್ಲರ ನೆಚ್ಚಿನ ಸಂಸದನಾಗಿ, ಕೇಂದ್ರದಲ್ಲಿ ಸಚಿವನಾಗಿ ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳ **ನವವರ್ಷಗಳಲ್ಲಾದ ಸಾಧನೆ, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣ** ಎನ್ನುವ ಈ ಕಿರು ಹೊತ್ತಿಗೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ತಾವೆಲ್ಲರೂ ಈ ಕಿರು ಹೊತ್ತಿಗೆಯನ್ನು ಸಂಪೂರ್ಣವಾಗಿ ಓದಿ, ನಮ್ಮಿಂದ ಆದ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಾವುಗಳು ತಿಳಿದುಕೊಂಡು ನಿಮ್ಮ ಸುತ್ತಮುತ್ತಲಿನವರಿಗೂ ತಿಳಿಸಬೇಕೆಂದು ಆಶಿಸುತ್ತೇನೆ.




**ಭಗವಂತ ಖೂಬಾ**

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ
ಹೊಸ ಮತ್ತು ನವೀಕರಿಸಬಹುದಾದ ಇಂಧನ ಮೂಲ ಖಾತೆ ಸಹ ಸಚಿವರು

bhagwanthkhuba

bhagwantkhuba

# ಪರಿವಿಡಿ

1) **ರೈತರಿಗಾಗಿ**
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ
- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ
- ರೈತರಿಗೆ ಕನಿಷ್ಠ ಬೆಂಬಲ ಬೆಲೆಯ ಅನುಷ್ಠಾನ
- ರಸಗೊಬ್ಬರ ಪೂರೈಕೆ (ಬೇವು ಲೇಪಿತ ಯೂರಿಯಾ ಪೂರೈಕೆ)
- ನೀರಾವರಿಗೆ ಆದ್ಯತೆ
- ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ
- ಅಂತರಾಷ್ಟ್ರೀಯ ಸಿರಿಧಾನ್ಯ ಮೇಳ

2) **ಶಿಕ್ಷಣ**
- ಸಿಪೇಟ್ ಕಾಲೇಜು
- ಸೈನಿಕ್ ಶಾಲೆ
- ಸಂಸದರ ಕ್ರೀಡಾ ಮಹಾಮೇಳ

3) **ಬಡವರಿಗಾಗಿ**
- ಜಲ ಜೀವನ್ ಮಿಷನ್ ಯೋಜನೆ
- (ಅನ್ನ) ಅಂತ್ಯೋದಯ ಯೋಜನೆ
- 14 ಮತ್ತು 15ನೇ ಹಣಕಾಸು ಯೋಜನೆ
- ಜನತೆಯ ಆರೋಗ್ಯಕ್ಕಾಗಿ ಕೋವಿಡ್ ಲಸಿಕೆ
- ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳು
- ಆಯುಷ್ಮಾನ್ ಭಾರತ್ ಯೋಜನೆ
- ಪ್ರಧಾನಮಂತ್ರಿ ಆವಾಸ್ ಯೋಜನೆ

4) **ಮಹಿಳಾ ಅಭಿವೃದ್ಧಿ**
- ಪ್ರಧಾನಮಂತ್ರಿ ಉಜ್ವಲ್ ಯೋಜನೆ
- ಪ್ರಧಾನಮಂತ್ರಿ ಮಾತೃವಂದನಾ ಯೋಜನೆ
- ತ್ರಿವಳಿ ತಲಾಖ್‌ಗೆ ಬೆಂಬಲ
- ಮನ್ ಕೀ ಬಾತ್
- ಸ್ವಚ್ಛ ಭಾರತದಡಿ ಶೌಚಾಲಯಗಳ ನಿರ್ಮಾಣ

5) **ಮೂಲಭೂತ ಸೌಕರ್ಯಗಳು**
- ರಾಷ್ಟ್ರೀಯ ಹೆದ್ದಾರಿಗಳು
- ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ
- ಅಮೃತ ಯೋಜನೆ
- ರೈಲ್ವೆ
- ಪಾಸ್‌ಪೋರ್ಟ್ ಸೇವಾ ಕೇಂದ್ರ
- ನಾಗರಿಕ ವಿಮಾನಯಾನ
- ಸಿ.ಎನ್.ಜಿ. (ಮನೆ ಮನೆಗೆ ಪೈಪಲೈನ್ ಮುಖಾಂತರ ಗ್ಯಾಸ್ ಸಂಪರ್ಕ)

6) **ಕೈಗಾರಿಕೋದ್ಯಮದಲ್ಲಿ ಮಹತ್ತರ ಬೆಳವಣಿಗೆ**
- "ಇನ್ವೆಸ್ಟ್ ಕರ್ನಾಟಕ" ಹುಬ್ಬಳ್ಳಿ
- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ
- ಕ್ರೆಡಿಟ್ ಔಟ್‌ರೀಚ್ ಕಾರ್ಯಕ್ರಮ
- ಪ್ರಧಾನಮಂತ್ರಿ ಮುದ್ರಾ ಯೋಜನೆ
- ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್, ಬೆಂಗಳೂರು
- ಪ್ರಧಾನಮಂತ್ರಿ ಸ್ವನಿಧಿ ಯೋಜನೆ
- ಕಾರ್ಮಿಕರ ಆಸ್ಪತ್ರೆ ಉದ್ಘಾಟನೆ
- ಸಿ.ಇ.ಟಿ.ಪಿ ನಿರ್ಮಾಣ
- ಆಟೋಕ್ಲಸ್ಟರ್ ನಿರ್ಮಾಣ

7) **ಎಲ್ಲಾ ವರ್ಗದವರ ಕಷ್ಟ ಸುಖದಲ್ಲಿ ಭಾಗಿ**
- ಕೋವಿಡ್ ಸಂದರ್ಭದಲ್ಲಿ ಜನತೆಯ ಜೊತೆ
- ದಿವ್ಯಾಂಗರಿಗೆ ಟ್ರೈಸೈಕಲ್ ಮತ್ತಿತರ ಆರೋಗ್ಯ ಸೌಲಭ್ಯಗಳು
- ಮೋಸದಿಂದ ಹೊರದೇಶಗಳಲ್ಲಿ ನಮ್ಮ ಜನತೆ ತೊಂದರೆಯಲ್ಲಿ ಸಿಲುಕಿದಾಗ
- ಪದ್ಮಶ್ರೀ ಪುರಸ್ಕೃತರಿಗೆ ಸನ್ಮಾನ ಸಮಾರಂಭ
- ಹುಲಸೂರ ತಾಲ್ಲೂಕಿಗೆ ಹಳ್ಳಿಗಳ ಸೇರ್ಪಡೆಗೆ ಹಗಲಿರುಳು ಶ್ರಮಿಸಿರುವೆ
- ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ

8) **ಧರ್ಮ, ದೇಶ ಮತ್ತು ಸಂಸ್ಕೃತಿಯ ಉಳಿವಿಗಾಗಿ**
- ಕ್ಷೇತ್ರದ ಮಠ ಮಾನ್ಯಗಳಿಗೆ ಅನುದಾನ
- ಪ್ರಸಾದ ಯೋಜನೆಯಡಿ ಪಾಪನಾಶ ದೇವಾಲಯದ ಅಭಿವೃದ್ಧಿ
- ಯಶಸ್ವಿ ಗಾಂಧಿ ಸಂಕಲ್ಪ ಯಾತ್ರೆ
- ಸ್ವಾತಂತ್ರ್ಯ ಭಾರತದ ಆಜಾದಿ ಕಾ ಅಮೃತ್ ಮಹೋತ್ಸವ
- ವಿವಿಧ ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವಿಕೆ
- ದೇಶ ಕಾಯುವ ಯೋಧರೊಂದಿಗೆ
- ಅಂಚೆ ಸಿಬ್ಬಂದಿಯ ವೇತನ ಹೆಚ್ಚಳದಲ್ಲಿ ಯಶಸ್ವಿ

9) **ಸ್ವಾತಂತ್ರ್ಯ ಭಾರತದಲ್ಲಿ ಜಿಲ್ಲೆಯಿಂದ ಮೊಟ್ಟ ಮೊದಲ ಬಾರಿಗೆ ಕೇಂದ್ರದಲ್ಲಿ ಸಚಿವನಾಗಿ**

10) **ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಪ್ರಮುಖ ಸಾಧನೆಗಳು**

11) **ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವಾಲಯದ ಪ್ರಮುಖ ಸಾಧನೆಗಳು**

12) **ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ**



# ದೇಶದ ಬೆನ್ನೆಲುಬಾಗಿರುವ ರೈತರ ಕಲ್ಯಾಣ

ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಮೋದಿಜಿಯವರು 2014ರಲ್ಲಿಯೇ ಘೋಷಿಸಿ, ಸಮಯಕ್ಕೆ ಸರಿಯಾಗಿ ರಸಗೊಬ್ಬರ, ಬೀಜ ವಿತರಣೆಗೆ ಅಗತ್ಯ ಕ್ರಮ ಕೈಗೊಂಡು, ಫಸಲ್ ಬಿಮಾ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್, ಎಮ್.ಎಸ್.ಪಿ, ಮುಂತಾದ ಯೋಜನೆಗಳು ಜಾರಿಗೆ ತಂದು ರೈತರ ಬಾಳಿನ ಆಶಾಕಿರಣವಾಗಿದ್ದಾರೆ.

## ಕ್ಷೇತ್ರದ 8 ಲಕ್ಷ ರೈತರಿಗೆ ಪ್ರಯೋಜನ

## 1 ಫಸಲ್ ಬಿಮಾ ಯೋಜನೆ

प्रधानमंत्री फसल बीमा योजना

ದೇಶದಲ್ಲಿ 12.38 ಕೋಟಿ ಜನರಿಗೆ ರೂ. 1,30,185 ಕೋಟಿ ಪರಿಹಾರ

ಕ್ಷೇತ್ರದಲ್ಲಿ 5 ಲಕ್ಷಕ್ಕೂ ಹೆಚ್ಚಿನ ರೈತರಿಗೆ

**ರೂ.501 ಕೋಟಿ ಪರಿಹಾರ**

## 2 ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆ

ದೇಶದ 11 ಕೋಟಿ ರೈತರಿಗೆ 2.2 ಲಕ್ಷ ಕೋಟಿ ಪ್ರೋತ್ಸಾಹ ಧನ

ಕ್ಷೇತ್ರದಲ್ಲಿ 4,02,520 ರೈತರಿಗೆ

**ರೂ.556 ಕೋಟಿ**

ಪ್ರೋತ್ಸಾಹ ಧನ ವಿತರಿಸಲಾಗಿದೆ




## 3 ರೈತರಿಗೆ ಕನಿಷ್ಠ ಬೆಂಬಲ ಬೆಲೆಯ ಅನುಷ್ಠಾನ (ಎಂ.ಎಸ್.ಪಿ.)



ರೈತರು ಬೆಳೆಯುವ ಬೆಳೆಗಳ ಮೇಲೆ 80% ದರ ಹೆಚ್ಚಳ ಮಾಡಲಾಗಿದೆ.

ಕ್ಷೇತ್ರದಲ್ಲಿ ಸುಮಾರು **1.50 ಲಕ್ಷ**

ರೈತರು ತನ್ನ ವಿವಿಧ ಬೆಳೆಗಳು ಮಾರಾಟ ಮಾಡಿದ್ದಾರೆ





bhagwanthkhuba bhagwantkhuba



# ರಸಗೊಬ್ಬರ ಪೂರೈಕೆ

ಭಾರತದ ಪ್ರತಿಯೊಬ್ಬ ರೈತ ಅರಿಯಲೇಬೇಕಾದ ವಿಷಯವೇನೆಂದರೆ, ಕೇಂದ್ರ ಸರ್ಕಾರ ರೈತನಿಗೆ ರಸಗೊಬ್ಬರ ದರದ ಹೊರೆಯಾಗಬಾರದು ಎನ್ನುವ ಕಾರಣಕ್ಕೆ ಪ್ರತಿ ವರ್ಷ ಸಬ್ಸಿಡಿ ನೀಡುತ್ತಿದೆ, ಈ ವರ್ಷ **ರೂ. 2.50 ಲಕ್ಷ ಕೋಟಿ ಸಬ್ಸಿಡಿಯನ್ನು ನೀಡಿದೆ.**

ರೈತರಿಗೆ
**2.50**
ಲಕ್ಷ ಕೋಟಿ ಸಬ್ಸಿಡಿ

## 4 ಬೇವು ಲೇಪಿತ ಯೂರಿಯಾ ಪೂರೈಕೆ

ಡಿ.ಎ.ಪಿ ಗೊಬ್ಬರಕ್ಕೆ **ರೂ.2000** ಯೂರಿಯಾಗೆ **ರೂ.2400** ಕೇಂದ್ರ ಸರ್ಕಾರ ಸಬ್ಸಿಡಿಯನ್ನು ಕಂಪನಿಗಳಿಗೆ ನೀಡುತ್ತದೆ. ಆವಾಗ ರೈತನಿಗೆ **ರೂ. 1350** ಮತ್ತು **ರೂ. 262** ಗೆ ರಸಗೊಬ್ಬರ ಲಭ್ಯವಾಗುತ್ತದೆ. ರಾಜ್ಯದಲ್ಲಿ ಹಾಗೂ **ಬೀದರ್ ಲೋಕಸಭಾ ಕ್ಷೇತ್ರದಲ್ಲಿ** ಅವಶ್ಯಕತೆಗೆ ಬೇಕಾಗುವಷ್ಟು ರಸಗೊಬ್ಬರ ಲಭ್ಯವಿದೆ.



## 5 ನೀರಾವರಿಗೆ ಆದ್ಯತೆ



**ರೂ. 560.70 ಕೋಟಿ** ಅನುದಾನದಲ್ಲಿ ಔರಾದ ತಾಲ್ಲೂಕಿನ 36 ಕೆರೆಗಳಿಗೆ ನೀರು ತುಂಬಿಸುವ ಯೋಜನೆ

**ರೂ. 762 ಕೋಟಿ** ಅನುದಾನದಲ್ಲಿ ಮೇಹಕರ್ ಏತ ನೀರಾವರಿ ಯೋಜನೆ

**ರೂ. 49.50 ಕೋಟಿ** ಅನುದಾನದಲ್ಲಿ ಆಳಂದ ತಾಲ್ಲೂಕಿನ 8 ಕೆರೆಗಳಿಗೆ ನೀರು ತುಂಬಿಸುವ ಯೋಜನೆ

**ರೂ. 204 ಕೋಟಿ** ಅನುದಾನದಲ್ಲಿ ಚಿಂಚೋಳಿ ತಾಲ್ಲೂಕಿನ ಐನಾಪೂರ ಏತ ನೀರಾವರಿ ಯೋಜನೆ

## ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ 6

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಒಟ್ಟು **ರೂ. 264 ಕೋಟಿ** ಗಳ ಪ್ರಸ್ತಾವನೆಯನ್ನು ಬಿಜೆಪಿ ಸರ್ಕಾರ ಆಡಳಿತದಲ್ಲಿದ್ದ ಸಮಯದಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಶೀಘ್ರದಲ್ಲಿ ಕಾಮಗಾರಿಗಳು ಪ್ರಾರಂಭವಾಗಲಿವೆ.

ರೈತರಿಗೆ ಕೃಷಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ, ಬ್ರೀಡ್ಜ್ ಕಂ ಬ್ಯಾರೇಜ್, ಬಂದಾರಾ, ಕುಡಿಯುವ ನೀರಿನ ಟ್ಯಾಂಕ್‌ಗಳ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಂಡು ಕ್ಷೇತ್ರದಾದ್ಯಂತ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು






# ಅಂತರಾಷ್ಟ್ರೀಯ ಸಿರಿಧಾನ್ಯ ಮೇಳ

ಮಾನ್ಯ ಪ್ರಧಾನಮಂತ್ರಿಗಳ ಆಶಯದಂತೆ ಈ ವರ್ಷ ಸಿರಿಧಾನ್ಯ ಮೇಳ ಆಚರಿಸುವಂತೆ ಘೋಷಣೆ ಮಾಡಿರುವ ಹಿನ್ನಲೆಯಲ್ಲಿ ಕ್ಷೇತ್ರದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ. ಜೊತೆಗೆ ರೈತ ಉತ್ಪಾದನಾ ಸಂಸ್ಥೆಗಳ ಮೂಲಕವು ಸಿರಿಧಾನ್ಯಗಳ ಬೆಳೆಯುವಿಕೆ, ಬಳಕೆ ಮತ್ತು ಮಾರಾಟಕ್ಕೆ ಒತ್ತು ನೀಡಲಾಗಿದೆ.

## ಆಳಂದ ಭೂತಾಯಿ ಮಿಲೆಟ್‌ಗೆ ಪ್ರಧಾನಿ ಮೋದಿ ಬಹುಪರಾಕ್

ಮನ್ ಕೀ ಬಾತ್‌ನಲ್ಲಿ ತಡಕಲ್ ಗ್ರಾಮದ ಭೂತಾಯಿ ಮಿಲೆಟ್ ಪ್ರಸ್ತಾಪಿಸಿದ ಮೋದಿ

## ಮೋದಿ ಮನಗೆದ್ದ ಹುಲಸೂರ ಮಹಿಳಾ ಕಿಸಾನ್ ಸಿರಿಧಾನ್ಯ

ಮಹಿಳೆಯರೇ ಕಟ್ಟಿದ್ದ ರೈತ ಉತ್ಪಾದಕರ ಸಂಸ್ಥೆಯ ಕಾರ್ಯಕ್ಕೆ ಮೆಚ್ಚುಗೆ | ಮೋದಿ ಮನ್ ಕೀ ಬಾತ್‌ಗೆ ಗಡಿ ಜಿಲ್ಲೆಯ ಮಂದಿ ಪುಳಕ | ರಾಷ್ಟ್ರೀಯ ಮಾನ್ಯತೆಯ ಖುಷಿ









bhagwanthkhuba bhagwantkhuba



## ಶಿಕ್ಷಣ

### ಸಿಪೇಟ್ ಕಾಲೇಜು

ಯಾವುದೋ ಒಂದು ಸಂದರ್ಭದಿಂದ ಅರ್ಧಕ್ಕೆ ಶಾಲೆ ಬಿಟ್ಟ ಮಕ್ಕಳಿಗಾಗಿ, ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಕೌಶಲ್ಯಾಭಿವೃದ್ಧಿ ನೀಡಿ ಅವರಿಗೆ ಸ್ವಯಂ ಉದ್ಯೋಗಿಗಳಾಗಿ ಮಾಡುವ ನಿಟ್ಟಿನಲ್ಲಿ ಬೀದರ್ ಜಿಲ್ಲೆಗೆ ಸಿಪೇಟ್ ಕಾಲೇಜು ಮಂಜುರಾತಿ ಮಾಡಿಸಿಕೊಂಡಿದ್ದೇನೆ. ಜಮೀನು ಸಹ ಮಂಜೂರಾತಿಯಾಗಿದೆ, ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ನೀಡಿದ ಕೂಡಲೆ ಕಾಲೇಜು ಕಟ್ಟಡ ನಿರ್ಮಾಣ ಪ್ರಾರಂಭವಾಗಲಿದೆ.

### ಸೈನಿಕ್ ಶಾಲೆ

ಬೀದರ್ ನಗರದಲ್ಲಿ ಸೈನಿಕ್ ಶಾಲೆ ಪ್ರಾರಂಭಿಸುವ ನಿಟ್ಟಿನಲ್ಲಿ ನನ್ನ ನಿರಂತರ ಪ್ರಯತ್ನ ನಡೆಯುತ್ತಿದೆ, ಶೀಘ್ರದಲ್ಲಿ ಬೀದರ್ ಜಿಲ್ಲೆಗೆ ಸೈನಿಕ ಶಾಲೆ ಮಂಜೂರಿಯಾಗುವ ನಿರೀಕ್ಷೆಯಲ್ಲಿದ್ದೇನೆ. ಇದರಿಂದ ಮಕ್ಕಳ ಕಲಿಕಾ ಗುಣಮಟ್ಟ ಹಾಗೂ ಈ ಭಾಗಕ್ಕೆ ಒಂದು ಗೌರವ ಸಿಗಲಿದೆ.

### ಸಂಸದರ ಕ್ರೀಡಾ ಮಹಾಮೇಳ

ಮಾನ್ಯ ಪ್ರಧಾನಮಂತ್ರಿಯವರ ನಿರ್ದೇಶನದಂತೆ, ಜಿಲ್ಲಾ ಮಟ್ಟದ ಸಂಸದರ ಕ್ರೀಡಾ ಮಹಾಮೇಳವನ್ನು ಆಯೋಜಿಸಿ, ವಲಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಮಹಾಮೇಳವನ್ನು ಆಯೋಜಿಸಿದ್ದೇನೆ, ಸುಮಾರು **30,000 ಮಕ್ಕಳು** ಕ್ರೀಡೆಯಲ್ಲಿ ಪಾಲ್ಗೊಂಡಿದ್ದರು, ಮುಂಬರುವ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಮಕ್ಕಳಿಗೆ ಇನ್ನು ಹೆಚ್ಚಿನ ಪ್ರಾಶಸ್ತ್ಯ ನೀಡಿ, ಬೆಳೆಸುವ ಇಚ್ಛೆಯನ್ನು ಹೊಂದಿದ್ದೇನೆ.



# ಬಡವರ ಬೆನ್ನೆಲುಬಾಗಿದೆ ನಮ್ಮ ಸರ್ಕಾರ

ಜಗತ್ತೇ, ಕೋವಿಡ್‌ನಿಂದ ನಲುಗಿ ಹೋಗಿದ್ದಾಗ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ದೇಶದ ಜನತೆಗೆ ಕೋವಿಡ್ ಲಸಿಕೆ, ಆಹಾರ ಪದಾರ್ಥ, ಉಚಿತ ಸಿಲಿಂಡರ್, ಮಹಿಳಾ ಜನಧನ್ ಖಾತೆಗೆ ಮೂರು ತಿಂಗಳು **ಒಟ್ಟು 1500 ರೂ.** ಜಮೆ ಮಾಡಿ, ಪ್ರತಿಯೊಬ್ಬರ ಮಾನ, ಸ್ವಾಭಿಮಾನ ಕಾಪಾಡಿದೆ ನಮ್ಮ ಮೋದಿ ಸರ್ಕಾರ.



## ಜಲ ಜೀವನ್ ಮಿಷನ್

ದೇಶದಲ್ಲಿ **11.88 ಕೋಟಿ** ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದೆ.

ಜಿಲ್ಲೆಯಲ್ಲಿ **3,14,882 ಮನೆಗಳ ಪೈಕಿ 1,83,606** ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ (58% ಒದಗಿಸಲಾಗಿದೆ). ಶೀಘ್ರದಲ್ಲಿ ಸಂಪೂರ್ಣ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗುವುದು

## ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ

ದೇಶದ **80 ಕೋಟಿ** ಜನರಿಗೆ ಉಚಿತ ಆಹಾರ ಧಾನ್ಯ ವಿತರಣೆ

ಕ್ಷೇತ್ರದ **15 ಲಕ್ಷ ಫಲಾನುಭವಿಗಳಿಗೆ** ಉಚಿತ ಆಹಾರ ಧಾನ್ಯ ವಿತರಣೆ

## 14 ಮತ್ತು 15ನೇ ಹಣಕಾಸು ಯೋಜನೆ

14ನೇ ಹಣಕಾಸು ಯೋಜನೆಯಡಿ ಕ್ಷೇತ್ರದ **230 ಗ್ರಾಮ ಪಂಚಾಯತ್**ಗಳಿಗೆ ಕೇಂದ್ರದಿಂದ **ರೂ. 140 ಕೋಟಿ** ಅನುದಾನ ಬಿಡುಗಡೆಯಾಗಿದೆ.

15ನೇ ಹಣಕಾಸು ಯೋಜನೆಯಡಿ ಕ್ಷೇತ್ರದ **230 ಗ್ರಾಮ ಪಂಚಾಯತ್**ಗಳಿಗೆ 2 ವರ್ಷದಲ್ಲಿ ಕೇಂದ್ರದಿಂದ **ರೂ. 165 ಕೋಟಿ** ಅನುದಾನ ಬಿಡುಗಡೆಯಾಗಿದೆ.

## ಕೋವಿಡ್ ಲಸಿಕೆ

ದೇಶದಲ್ಲಿ **220 ಕೋಟಿ** ಲಸಿಕೆಗಳು ಉಚಿತವಾಗಿ ನೀಡಲಾಗಿದೆ.

**ಕ್ಷೇತ್ರದಲ್ಲಿ 39,12,928** ಜನರಿಗೆ ಲಸಿಕೆಗಳು ಉಚಿತವಾಗಿ ನೀಡಲಾಗಿದೆ.





bhagwanthkhuba bhagwantkhuba




# ಬಡವರ ಬೆನ್ನೆಲುಬಾಗಿದೆ ನಮ್ಮ ಸರ್ಕಾರ

ಖಾಸಗಿ ಮೆಡಿಕಲ್ ಸ್ಟೋರ್‌ಗಳಲ್ಲಿ 100 ರೂಪಾಯಿ, ಜನೌಷಧಿಯಲ್ಲಿ ಕೇವಲ 20 ರೂಪಾಯಿಗೆ ಔಷಧಿಗಳು ಸಿಗುತ್ತವೆ. ಕ್ಷೇತ್ರದಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು, ಗ್ರಾಮೀಣ ಭಾಗದ ಜನರು ಇವುಗಳ ಲಾಭ ಪಡೆಯುತ್ತಿದ್ದಾರೆ.



## ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳು

ದೇಶದಲ್ಲಿ **9049** ಜನೌಷಧಿ ಕೇಂದ್ರಗಳು ಪ್ರಾರಂಭಿಸಲಾಗಿದೆ.

**ಕ್ಷೇತ್ರದಲ್ಲಿ 20** ಜನೌಷಧಿ ಕೇಂದ್ರಗಳು ಪ್ರಾರಂಭಿಸಲಾಗಿದೆ.



## ಆಯುಷ್ಮಾನ್ ಭಾರತ್

ದೇಶದಲ್ಲಿ **23.3 ಕೋಟಿ** ಜನರಿಗೆ ಆಯುಷ್ಮಾನ್ ಭಾರತ್ ಕಾರ್ಡ್ ವಿತರಣೆ ಹಾಗು **15 ಕೋಟಿ** ಜನರಿಗೆ ಉಚಿತ ಆರೋಗ್ಯ ಸೌಲಭ್ಯ

**ಕ್ಷೇತ್ರದಲ್ಲಿ 7 ಲಕ್ಷ** ಜನರಿಗೆ ಆಯುಷ್ಮಾನ್ ಭಾರತ್ ಕಾರ್ಡ್ ವಿತರಣೆ ಹಾಗು **78 ಸಾವಿರ** ಜನರಿಗೆ ಉಚಿತ ಆರೋಗ್ಯ ಸೌಲಭ್ಯ



## ಪ್ರಧಾನಮಂತ್ರಿ ಆವಾಸ್ ಯೋಜನೆ

ದೇಶದಲ್ಲಿ **4** ಕೋಟಿಗೂ ಹೆಚ್ಚು ನಗರ ಮತ್ತು ಗ್ರಾಮೀಣ ಮನೆಗಳು ಮಂಜೂರು

**ಕ್ಷೇತ್ರದಲ್ಲಿ 20 ಸಾವಿರಕ್ಕೂ** ಹೆಚ್ಚು ನಗರ ಮತ್ತು ಗ್ರಾಮೀಣ ಮನೆಗಳು ಮಂಜೂರು




# ಮಹಿಳಾ ಅಭಿವೃದ್ಧಿ

ಮಹಿಳಾ ಸಶಕ್ತಿಕರಣವೆಂಬುದು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾಣ್ಣುಡಿಗೆ ಬಂದಿದೆ ಎಂದರೆ ತಪ್ಪಾಗಲಾರದು, ಮಹಿಳೆಯರ ಆರೋಗ್ಯ, ಸ್ವಾಭಿಮಾನ ಕಾಪಾಡಿದ್ದು, ನಮ್ಮ ನರೇಂದ್ರ ಮೋದಿಜಿಯವರ ಸರ್ಕಾರ.

## 1. ಪ್ರಧಾನಮಂತ್ರಿ ಉಜ್ವಲ್ ಯೋಜನೆ

ದೇಶದ **9.6 ಕೋಟಿ** ಬಡವರಿಗೆ ಉಚಿತ ಗ್ಯಾಸ್ ಸಿಲಿಂಡರ್ ನೀಡಲಾಗಿದೆ ಹಾಗೂ ಪ್ರತಿ ಸಿಲಿಂಡರ್‌ಗೆ **ರೂ. 200** ಸಬ್ಸಿಡಿ ನೀಡಲಾಗುತ್ತಿದೆ.

ಕ್ಷೇತ್ರದಲ್ಲಿ **3,55,000** ಬಡ ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಉಚಿತ ಎಲ್.ಪಿ.ಜಿ. ಸಿಲಿಂಡರ್ ನೀಡಲಾಗಿದೆ.

ಕೋವಿಡ್ ಸಮಯದಲ್ಲಿ ಉಚಿತ **3 ಸಿಲಿಂಡರ್** ಹಾಗೂ ಮಹಿಳಾ ಜನ ಧನ ಖಾತೆಗೆ 3 ತಿಂಗಳಲ್ಲಿ ಒಟ್ಟು **1500 ರೂ.** ಸಹಾಯಧನ ಜಮೆ ಮಾಡಲಾಗಿದೆ.

ಬಡ ಗರ್ಭಿಣಿಯರಿಗೆ ಕೇಂದ್ರ ಸರ್ಕಾರದಿಂದ **5000/-** ಪ್ರೋತ್ಸಾಹಧನ ನೀಡಲಾಗುತ್ತಿದೆ.

## 2. ಪ್ರಧಾನಮಂತ್ರಿ ಮಾತೃವಂದನಾ ಯೋಜನೆ

ದೇಶದಲ್ಲಿ **3.94 ಕೋಟಿ** ಗರ್ಭಿಣಿಯರಿಗೆ ಪ್ರೋತ್ಸಾಹ ಧನ ನೀಡಲಾಗಿದೆ.

ಕ್ಷೇತ್ರದ **1 ಲಕ್ಷ**ಕ್ಕೂ ಹೆಚ್ಚು ಗರ್ಭಿಣಿಯರು ರೂ. **45 ಕೋಟಿ 20 ಲಕ್ಷ** ಪ್ರೋತ್ಸಾಹ ಧನ ಪಡೆದಿರುತ್ತಾರೆ.

## 3. ತ್ರಿವಳಿ ತಲಾಖ್‌ಗೆ ಬೆಂಬಲ

ಮುಸ್ಲಿಂ ಸಮುದಾಯದಲ್ಲಿ, ಮದುವೆಯಾದ ಮೇಲೆ ತಲಾಖ್ ಎನ್ನುವ ಪದ್ಧತಿಯಿಂದ ಸಂಬಂಧವನ್ನು ಕಡಿದುಕೊಳ್ಳಲಾಗುತ್ತಿತ್ತು, ಇದರಿಂದ ಮುಸ್ಲಿಂ ಮಹಿಳೆಯರು ಅನ್ಯಾಯಕ್ಕೆ ಒಳಗಾಗುತ್ತಿದ್ದರು, ನಮ್ಮ ದೇಶದಿಂದ ತಲಾಖ್ ಎಂಬ ಕಾನೂನನ್ನು ರದ್ದುಗೊಳಿಸಿ ಮಹಿಳೆಯರಿಗೆ ಸ್ವಾಭಿಮಾನ ಹಾಗೂ ಗೌರವದ ಜೀವನ ನೀಡಿದ್ದೇವೆ. ಇಂತಹ ಕಾನೂನಿನ ರದ್ದತಿಯಲ್ಲಿ ನಾನು ಸಹ ನನ್ನ ಮತಹಾಕಿ ಬೆಂಬಲಿಸಿರುವುದು ನನಗೆ ಹೆಮ್ಮೆಯಾಗುತ್ತಿದೆ.



# ಮೋದಿ ಮನಗೆದ್ದ ಹುಲಸೂರ ಆಳಂದ ಮಹಿಳಾ ಕಿಸಾನ್ ಸಿರಿಧಾನ್ಯ

ಬೀದರ್ ನಗರದಲ್ಲಿ ಸಿರಿಧಾನ್ಯ ಓಟವನ್ನು ಹಮ್ಮಿಕೊಂಡು, ಜನತೆಗೆ ಸಿರಿಧಾನ್ಯದ ಮಹತ್ವ ತಿಳಿಸುವ ಕೆಲಸ ಮಾಡಲಾಗಿದೆ, ಇದರ ಜೊತೆಗೆ ಸಿರಿಧಾನ್ಯಗಳಲ್ಲಿ ಕ್ಷೇತ್ರದ ತಾಯಂದಿರು/ಸಹೋದರಿಯರು ಮಾಡಿರುವ ಸಾಧನೆಗೆ **ಮಾನ್ಯ ಮೋದಿಜಿಯವರು ಅವರ ಮನ್ ಕಿ ಬಾತ್‌ನಲ್ಲಿ ಮೆಚ್ಚುಗೆ** ವ್ಯಕ್ತ ಪಡಿಸಿದ್ದಾರೆ.

## 4. ಮನ್ ಕೀ ಬಾತ್

ರೈತ ಉತ್ಪಾದನಾ ಕೇಂದ್ರದ ಮೂಲಕ ಕ್ಷೇತ್ರದ ಹುಲಸೂರ ತಾಲ್ಲೂಕಿನ **ಮಹಿಳಾ ಕಿಸಾನ್ ಮಿಲೆಟ್ಸ್ ಪ್ರೊಡ್ಯೂಸರ್ ಕಂಪನಿ** ಹಾಗೂ ಅಳಂದ ತಾಲ್ಲೂಕಿನ ತಡಕಲ್ ಗ್ರಾಮದ **ಭೂ ತಾಯಿ ಮಿಲೆಟ್ಸ್ ಫಾರ್ಮರ್ ಪ್ರೊಡ್ಯೂಸರ್ ಕಂಪನಿ** ಹೆಸರಿನಡಿ ಕ್ಷೇತ್ರದ ತಾಯಂದಿರು ಹಾಗೂ ಸಹೋದರಿಯರು ಸೇರಿ ರೈತ ಉತ್ಪಾದನಾ ಸಂಸ್ಥೆಗಳ ಮೂಲಕ ಸಿರಿಧಾನ್ಯಗಳ ಸಂಸ್ಕರಣೆ, ಹಿಟ್ಟು ತಯಾರಿಕೆ, ಲಡ್ಡು ತಯಾರಿಕೆ, ಅಕ್ಕಿ ರವೆ ತಯಾರಿಕೆ, ಕುಸುಬೆ ಎಣ್ಣೆ ತಯಾರಿಕೆ, ಸಿದ್ದ ಬೆಲ್ಲ, ಅರಿಶಿಣ ಪುಡಿ, ಎಳ್ಳಿನ ಉಂಡೆ ಇತ್ಯಾದಿ ಅಗತ್ಯ ವಸ್ತುಗಳು ತಯಾರಿಸಿ, ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ವ್ಯವಹಾರ ಮಾಡುತ್ತಿದ್ದಾರೆ.

- **ಸನ್ಮಾನ್ಯ ಶ್ರೀ ನರೇಂದ್ರ ಮೋದಿ**
ಪ್ರಧಾನಮಂತ್ರಿಗಳು, ಭಾರತ ಸರ್ಕಾರ

## 5. ಸ್ವಚ್ಛ ಭಾರತದಡಿ ಶೌಚಾಲಯಗಳ ನಿರ್ಮಾಣ

ದೇಶದಲ್ಲಿ ಒಟ್ಟು **11.72 ಕೋಟಿ** ಶೌಚಾಲಯಗಳ ನಿರ್ಮಾಣ

ಬೀದರ್ ಕ್ಷೇತ್ರದಲ್ಲಿ **3,45,256 ಶೌಚಾಲಯಗಳ** ನಿರ್ಮಾಣ

ಹುಲಸೂರು ಹಾಗೂ ಆಳಂದ್ ಮಹಿಳಾ ಕಿಸಾನ್ ಸಿರಿಧಾನ್ಯದ ಸದಸ್ಯರು








# ಮೂಲಭೂತ ಸೌಕರ್ಯಗಳು

- **ರೂ. 1544 ಕೋಟಿಗಳಲ್ಲಿ,** 145 ಕಿ.ಮೀ. ಸಂಗಾರೆಡ್ಡಿ–ಮುಂಬೈ ರಾಷ್ಟ್ರೀಯ ಹೆದ್ದಾರಿ
- **ರೂ. 300 ಕೋಟಿ** ಅನುದಾನದಲ್ಲಿ ಒಟ್ಟು 47 ಕಿ.ಮೀ. ಬೀದರ್–ಹುಮನಾಬಾದ್ ರಾ.ಹೆ.
- **ರೂ. 340 ಕೋಟಿ**ಯಲ್ಲಿ 57 ಕಿ.ಮೀ. ಬೀದರ್–ಕಮಲನಗರ ಹೆದ್ದಾರಿ ಪೂರ್ಣ
- **ರೂ. 336 ಕೋಟಿ** ಅನುದಾನದಲ್ಲಿ 46 ಕಿ.ಮೀ. ಬೀದರ್ ಔರಾದ್ ಹೆದ್ದಾರಿ ಪ್ರಗತಿಯಲ್ಲಿದೆ.
- **ರೂ. 95 ಕೋಟಿ**ಯಲ್ಲಿ 2.37 ಕಿ.ಮೀ. ಸೌಬಾದ ಬೈಪಾಸ್ ರಸ್ತೆ ಪೂರ್ಣ
- **ರೂ. 26 ಕೋಟಿ**ಗಳಲ್ಲಿ ಹುಲಸೂರ–ಮಹಾರಾಷ್ಟ್ರ 5 ಕಿ.ಮೀ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುತ್ತಿದೆ.
- ಉಳಿದ ಹೆದ್ದಾರಿಗಳು ಮಂಜೂರಾತಿ ಹಂತದಲ್ಲಿವೆ.

## 1 ರಾಷ್ಟ್ರೀಯ ಹೆದ್ದಾರಿ

ದೇಶದಲ್ಲಿ **64 ಸಾವಿರ ಕಿ.ಮೀ.** ಹೆದ್ದಾರಿ ನಿರ್ಮಾಣವಾಗಲಿದೆ.
ಕ್ಷೇತ್ರದಲ್ಲಿ **3000 ಕೋಟಿಯಲ್ಲಿ 510 ಕಿ.ಮೀ.** ಹೆದ್ದಾರಿ ನಿರ್ಮಾಣವಾಗುತ್ತಿದೆ.



## 2 ಗ್ರಾಮ ಸಡಕ್ ಯೋಜನೆ

- ದೇಶದಲ್ಲಿ **4 ಲಕ್ಷ ಕಿ.ಮೀ.** ಗ್ರಾಮೀಣ ರಸ್ತೆ ನಿರ್ಮಾಣವಾಗುತ್ತಿದೆ.
- ಕ್ಷೇತ್ರದಲ್ಲಿ **320 ಕೋಟಿಯಲ್ಲಿ 285 ಕಿ.ಮೀ.** ಗ್ರಾಮೀಣ ರಸ್ತೆ ನಿರ್ಮಾಣವಾಗುತ್ತಿದೆ.
- ರೂ. 300 ಕೋಟಿ ಅನುದಾನದಲ್ಲಿ ಕ್ಷೇತ್ರದ 18 ರಸ್ತೆಗಳು ಸಿ.ಆರ್.ಎಫ್ ಅಡಿಯಲ್ಲಿ ನಿರ್ಮಾಣವಾಗಿದೆ.

## 3 ಅಮೃತ ಯೋಜನೆಯಿಂದ ಬೀದರ್ ನಗರಾಭಿವೃದ್ಧಿ

ದೇಶದಲ್ಲಿ **ರೂ. 37,900 ಕೋಟಿ**ಯಲ್ಲಿ **4900 ನಗರ** ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ
ಬೀದರ್ ನಗರದಲ್ಲಿ **ರೂ.325 ಕೋಟಿ**ಯಲ್ಲಿ ಯು.ಜಿ.ಡಿ. ಕಾಮಗಾರಿ ನಡೆಯುತ್ತಿದೆ





# ಮೂಲಭೂತ ಸೌಕರ್ಯಗಳು

- ಬೀದರ್ ನಗರದಿಂದ **13 ಹೊಸ ರೈಲುಗಳು** ಪ್ರಾರಂಭ.
- ಬೀದರ್– ಕಲಬುರಗಿ **2 ಡೆಮೊ ರೈಲುಗಳ** ಪ್ರಾರಂಭ.
- ಬೀದರ್ ನಿಂದ ಯಶವಂತಪುರ, ಮುಂಬೈ, ತಿರುಪತಿ, ಶಿರಡಿ, ಮಚ್ಛಲೀಪಟ್ನಂ, ಪಂಡರಾಪುರಕ್ಕೆ ರೈಲುಗಳು ಚಲಿಸುತ್ತಿವೆ.
- **150 ಕೋಟಿ** ಅನುದಾನದಲ್ಲಿ 37.207 ಕಿ.ಮೀ. ಬೀದರ್–ಕಲಬುರಗಿ ರೈಲ್ವೆ ಲೈನ್ ಅಪೂರ್ಣಗೊಳಿಸಲಾಗಿತ್ತು
- **ಉಳಿದ 73.193 ಕಿ.ಮೀ.** ಕೇವಲ 3 ವರ್ಷದಲ್ಲಿ **1392 ಕೋಟಿ** ಅನುದಾನದಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗಿದೆ.
- **ರೂ. 2354 ಕೋಟಿ** ಅನುದಾನದಲ್ಲಿ ಬೀದರ್–ನಾಂದೇಡ್ ರೈಲ್ವೆ ಮಂಜೂರಾತಿ ಸದ್ಯ **100 ಕೋಟಿ ರೂ.** ಮೀಸಲಿಡಲಾಗಿದೆ.
- **ಕಲಬುರಗಿ–ಲಾತೂರ್ ರೋಡ್ ವಾಯ ಆಳಂದ್ ಹೊಸ ರೈಲ್ವೆ ಲೈನ್** ಸರ್ವೆ ಮುಗಿದಿರುತ್ತದೆ. ಮಂಜೂರಾತಿಗಾಗಿ ಸಿದ್ಧತೆ ನಡೆಯುತ್ತಿದೆ.
- ಜನತೆಯ ಬೇಡಿಕೆಯಂತೆ ಹಂತ ಹಂತವಾಗಿ ಹೊಸ ರೈಲು ಸೇವೆಗಳು ನಮ್ಮ ಕ್ಷೇತ್ರಕ್ಕೆ ಬರಲಿದೆ.

## 4 ರೈಲ್ವೆ

ದೇಶದಲ್ಲಿ 2009–14ರವರೆಗೆ ಪ್ರತಿದಿನ **5.4 ಕಿ.ಮೀ.** ರೈಲ್ವೆ ಹಳಿಗಳು ಹಾಕಲಾಗುತ್ತಿತ್ತು. ದೇಶದಲ್ಲಿ 2014 ರಿಂದ ಪ್ರತಿದಿನ **14.3 ಕಿ.ಮೀ.** ಹಳಿ ಹಾಕಲಾಗುತ್ತಿದೆ. ಕೆಲಸ ವೇಗವಾಗಿ ನಡೆಯುತ್ತಿದೆ. ಬೀದರ್ ನಾಂದೇಡ ಹೊಸ ಮಾರ್ಗಕ್ಕೆ ರೈಲ್ವೆಯಿಂದ **100 ಕೋಟಿ ಅನುದಾನ** ಮೀಸಲಿಡಲಾಗಿದೆ.

## 5 ಪಾಸ್‌ಪೋರ್ಟ್ ಸೇವಾ ಕೇಂದ್ರ

2017ರಲ್ಲಿ ಬೀದರ ನಗರದ ಪೋಸ್ಟ್ ಆಫೀಸ್‌ನಲ್ಲಿಯೇ **ಪಾಸ್‌ಪೋರ್ಟ್ ಸೇವಾ ಕೇಂದ್ರ** ಪ್ರಾರಂಭಿಸಲಾಯಿತು. ಇದರಿಂದ ನಮ್ಮ ಜಿಲ್ಲೆಯಲ್ಲಿ ಸುಮಾರು **50 ಸಾವಿರಕ್ಕೂ ಹೆಚ್ಚು** ಜನರ ಬಳಿ ಪಾಸ್‌ಪೋರ್ಟ್ ಇದೆ.




## 6 ನಾಗರಿಕ ವಿಮಾನಯಾನ

ನಾನು ಸಂಸದನಾದ ಮೇಲೆ ಸತತವಾಗಿ 6 ವರ್ಷಗಳ ಕಾಲ ಪ್ರಯತ್ನ ಪಟ್ಟು, ವಿಮಾನಯಾನದ ಹಾರಾಟಕ್ಕೆ ಇದ್ದ ಎಲ್ಲಾ ಅಡೆತಡೆಗಳು ಮುಗಿಸಿಕೊಂಡು, ಬೀದರ್‌ನಿಂದ **ಬೆಂಗಳೂರಿಗೆ ವಿಮಾನಯಾನದ ಸೇವೆ**ಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಗಿದ್ದೇನೆ.

## 7 ಪೈಪುಗಳ ಮೂಲಕ ಅಡುಗೆ ಅನಿಲ ಸರಬರಾಜು ಯೋಜನೆ (ಸಿ.ಎನ್.ಜಿ)

ಬೀದರ್ ನಗರದಲ್ಲಿ **ರೂ. 125 ಕೋಟಿ** ಅನುದಾನದಲ್ಲಿ ಸಿ.ಎನ್.ಜಿ. ಕಾಮಗಾರಿ ನಡೆಯುತ್ತಿದ್ದು, ಮನೆ ಮನೆಗೆ ಪೈಪ್ ಮುಖಾಂತರ ಗ್ಯಾಸ್ ಸಂಪರ್ಕ ಒದಗಿಸುವ ಕೆಲಸ ಪ್ರಗತಿಯಲ್ಲಿದೆ. ಮುಂಬರುವ ದಿನಗಳಲ್ಲಿ ಜನರು ಗ್ಯಾಸ್ ಸಿಲಿಂಡರ್ ಬುಕ್ ಮಾಡುವ ಅವಶ್ಯಕತೆ ಇರುವುದಿಲ್ಲ.



# ಕೈಗಾರಿಕೋದ್ಯಮದಲ್ಲಿ ಮಹತ್ತರ ಬೆಳವಣಿಗೆ

ನನ್ನ ವಿಶೇಷ ಕಾಳಜಿಯಿಂದ ಬೀದರ್ ಕ್ಷೇತ್ರದಲ್ಲಿ 2014-15 ರಿಂದ 2022-23ರವರೆಗೆ ಒಟ್ಟು **273 ಹೊಸ ಕಂಪನಿಗಳು** ಪ್ರಾರಂಭವಾಗಿದ್ದು,
**373 ಕೋಟಿ ಬಂಡವಾಳ ಬಂದಿದ್ದು ಒಟ್ಟು 2595 ಹೊಸ ಉದ್ಯೋಗ ಸೃಷ್ಟಿಯಾಗಿವೆ.**



## "ಇನ್ವೆಸ್ಟ್ ಕರ್ನಾಟಕ" ಹುಬ್ಬಳ್ಳಿ

ಕೆ.ಎನ್.ಫಾರ್ಮ ಇಕ್ವಿಪ್‌ಮೇಂಟ್ಸ್ ಪ್ರೈವೇಟ್ ಲಿಮಿಟೆಡ್ ಅವರು **ಒಟ್ಟು 115 ಕೋಟಿ** ರೂಪಾಯಿಯಲ್ಲಿ ಕೃಷಿ ಉಪಕರಣಗಳ ತಯಾರಿಕೆ ಘಟಕ ಸ್ಥಾಪನೆಗೆ ಮುಂದಾಗಿ ಒಡಂಬಡಿಕೆ ಮಾಡಿಕೊಂಡಿದ್ದಾರೆ. ಕೋವಿಡ್ ಕಾರಣದಿಂದ ಪ್ರಾರಂಭಕ್ಕೆ ಅಡ್ಡಿಯಾಗಿದ್ದು ಮರಳಿ ಪ್ರಾರಂಭಿಸುವ ಪ್ರಯತ್ನ ಮಾಡಲಾಗುತ್ತಿದೆ.

## ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ




185 ಗ್ರಾಮ ಪಂಚಾಯತ್ ಒಕ್ಕೂಟಗಳಲ್ಲಿ **153 ಗ್ರಾಮ ಪಂಚಾಯತ್**ಗಳ **97,749** ಮಹಿಳಾ ಸದಸ್ಯರಿಗೆ ಸಮುದಾಯ ಬಂಡವಾಳ ನಿಧಿಯಡಿ **30.50 ಕೋಟಿ** ಅನುದಾನವನ್ನು ನೀಡಲಾಗಿದೆ.
ಹರ್ ಘರ್ ತಿರಂಗಾ ಅಭಿಯಾನದಡಿ ಕ್ಷೇತ್ರದ ನಮ್ಮ ತಾಯಂದಿರು **1,17,000** ರಾಷ್ಟ್ರ ಧ್ವಜಗಳು ನಿರ್ಮಿಸಿರುವುದು ವಿಶೇಷ.



## ಕ್ರೆಡಿಟ್ ಔಟ್‌ರೀಚ್ ಕಾರ್ಯಕ್ರಮ

ರಾಷ್ಟ್ರೀಕೃತ ಬ್ಯಾಂಕುಗಳಿಂದ ವಿವಿಧ ಯೋಜನೆಯಡಿ ಸಾಲ ಮತ್ತು ಸಹಾಯಧನ ಪಡೆದ ಸ್ವ-ಸಹಾಯ ಸಂಘದ ಮಹಿಳೆಯರಿಗೆ, ಯುವ ಉದ್ಯಮಿದಾರರಿಗೆ ಸಾಲ ಪತ್ರಗಳು ಹಾಗೂ ಸಹಾಯಧನದ ಚೆಕ್‌ಗಳು ವಿತರಿಸಲಾಯಿತು.

## ಮುದ್ರಾ ಯೋಜನೆ

ಸುಮಾರು **39.65 ಕೋಟಿ** ಸಾಲ ನೀಡಲಾಗಿದೆ.

ಸುಮಾರು **1.50 ಲಕ್ಷಕ್ಕಿಂತ** ಹೊಸ ವ್ಯಾಪಾರಿಗಳಿಗೆ **115 ಕೋಟಿ** ಸಾಲ






9 ವರ್ಷಗಳು

# ಕೈಗಾರಿಕೋದ್ಯಮದಲ್ಲಿ ಮಹತ್ತರ ಬೆಳವಣಿಗೆ

## ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್, ಬೆಂಗಳೂರು

ಬೆಂಗಳೂರಿನಲ್ಲಿ ನಡೆದ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್‌ನಲ್ಲಿ ವಿವಿಧ ಕಂಪನಿಗಳೊಂದಿಗೆ **ರೂ. 10 ಲಕ್ಷ** ಕೋಟಿಗಳ ಒಡಂಬಡಿಕೆಯಾಗಿದ್ದು ಇದರಿಂದ ನಮ್ಮ ಜಿಲ್ಲೆಯ ಹುಮನಾಬಾದ್ ಮತ್ತು ಬೀದರ್ ಕೈಗಾರಿಕಾ ಪ್ರದೇಶದಲ್ಲಿಯೂ ಹೊಸ ಕೈಗಾರಿಕೆಗಳ ಸ್ಥಾಪನೆಯ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

## ಪ್ರಧಾನಮಂತ್ರಿ ಸ್ವನಿಧಿ ಯೋಜನೆ

**34.45 ಲಕ್ಷ** ಬೀದಿಬದಿ ವ್ಯಾಪಾರಿಗಳು

**ಕ್ಷೇತ್ರದ 22,258** ಬೀದಿ ವ್ಯಾಪಾರಿಗಳಿಗೆ ಸಾಲ ನೀಡಲಾಗಿದೆ.



## ಕಾರ್ಮಿಕರ ಆಸ್ಪತ್ರೆ ಉದ್ಘಾಟನೆ

ಬೀದರ್ ಜಿಲ್ಲೆಯ ಕಾರ್ಮಿಕರಿಗಾಗಿ ಸರ್ಕಾರದ ವತಿಯಿಂದ ಕೋಳಾರ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ.

## ಸಿ.ಇ.ಟಿ.ಪಿ ನಿರ್ಮಾಣ

**ರೂ. 40 ಕೋಟಿ** ಅನುದಾನದಲ್ಲಿ ಕೋಳಾರ್ ಕೈಗಾರಿಕಾ ಪ್ರದೇಶದಲ್ಲಿ ಸಿ.ಇ.ಟಿ.ಪಿ ನಿರ್ಮಾಣವಾಗುತ್ತಿದೆ. ಕೈಗಾರಿಕೆಗಳಿಂದ ಹೊರ ಬರುವ ರಾಸಾಯನಿಕ ಹೊರಸೂಸುವಿಕೆಗಳು ಮತ್ತು ಜಲಮಾಲಿನ್ಯವನ್ನು ಶುದ್ಧೀಕರಣಗೊಳಿಸಿ ಪುನರ್‌ಬಳಕೆ ಮಾಡಲಾಗುವುದು.

## ಆಟೋಕ್ಲಸ್ಟರ್ ನಿರ್ಮಾಣ

**ರೂ. 10 ಕೋಟಿ** ಅನುದಾನದಲ್ಲಿ ನೌಬಾದ್ ಆಟೋನಗರದಲ್ಲಿ ಆಟೋಕ್ಲಸ್ಟರ್ ನಿರ್ಮಿಸಲಾಗಿದೆ. ಮೆಕ್ಯಾನಿಕ್, ಆಟೋಮೊಬೈಲ್ ಸಂಬಂಧಿಸಿದ ಸೇವೆಗಳನ್ನು ಇಲ್ಲಿ ಪಡೆಯಬಹುದಾಗಿದೆ,

**ನಮ್ಮಲ್ಲಿಯ ಯುವಕರು ಸ್ಟಾರ್ಟ್‌ಅಫ್ ಅಡಿ ಕ್ಷೇತ್ರದಲ್ಲಿ ಹತ್ತು ಹಲವು ಸಣ್ಣ ಸಣ್ಣ ಕಂಪನಿಗಳು ಪ್ರಾರಂಭಿಸಿ, ನೂರಾರು ಜನರಿಗೆ ಕೆಲಸ ಕೊಡುವಂತವರಾಗಿದ್ದಾರೆ, ಜೊತೆಗೆ ಇರುವ ದೊಡ್ಡ ದೊಡ್ಡ ಕಂಪನಿಗಳಿಂದ ಜನರಿಗೆ ಅನುಕೂಲವಾಗುವ ಹಾಗೆ ನಾನು ನನ್ನ ಕೆಲಸವನ್ನು ನಿರ್ವಹಿಸುತ್ತಿದ್ದೇನೆ.**





# ಎಲ್ಲಾ ವರ್ಗದವರ ಕಷ್ಟ ಸುಖದಲ್ಲಿ ಭಾಗಿ

2014ರಲ್ಲಿ ಕ್ಷೇತ್ರದ ಜನರಿಗೆ ನಾನು ಹೆಚ್ಚು ಪರಿಚಯವಿಲ್ಲದೆ ಇದ್ದರೂ ಸಹ ನನಗೆ ಮತ ಹಾಕಿ ಗೆಲ್ಲಿಸಿದ ಬಂಧುಗಳು ನೀವು, ಎಲ್ಲರ ಮನೆಯ ಮಗನಾಗಿ, ಸಹೋದರನಾಗಿ ನಿಮ್ಮ ಕಷ್ಟ ಸುಖದಲ್ಲಿ, ಸಂಸದನಾಗಿ ನನ್ನ ಇತಿಮಿತಿಯಲ್ಲಿ ನಾನು ನಿಮ್ಮ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿರುವೆ.

ಕೋವಿಡ್‌ನಲ್ಲಿ ಕುವೈತ್ ದೇಶದಲ್ಲಿ ಸಿಲುಕಿದ್ದ ನಮ್ಮ ಯುವಕರನ್ನು, ವಾರದೊಳಗೆ ಮರಳಿ ದೇಶಕ್ಕೆ ಕರೆತಂದಾಗ, ಯುವಕರು ಮುಕ್ತ ಮನಸ್ಸಿನಿಂದ ಸನ್ಮಾನಿಸಿ, ದೇಶದ ಪ್ರಧಾನಿಗಳಿಗೆ ಧನ್ಯವಾದಗಳು ತಿಳಿಸಿದರು.

## ಕೋವಿಡ್ ಸಂದರ್ಭದಲ್ಲಿ ಜನತೆಯ ಜೊತೆ

ಕೋವಿಡ್ ಸಂಧರ್ಭದಲ್ಲಿ ಕುವೈತ್‌ನಲ್ಲಿದ್ದ ಕ್ಷೇತ್ರದ ಯುವಕರೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಧೈರ್ಯ ತುಂಬಿರುವೆ.

ಪ್ರತಿನಿತ್ಯ ವೈದ್ಯರ ಜೊತೆ ಸಂಪರ್ಕದಲ್ಲಿದ್ದು, ಔಷಧಗಳು, ಲಸಿಕೆಗಳ ಪೂರೈಕೆ ವರದಿ ಪಡೆದುಕೊಳ್ಳಲಾಯಿತು ಮತ್ತು ಕೇಂದ್ರ ಸರ್ಕಾರದಿಂದ ಕ್ಷೇತ್ರದ 7 ತಾಲ್ಲೂಕು ಆಸ್ಪತ್ರೆಗಳಲ್ಲಿ ಆಕ್ಸಿಜನ್ ಪ್ಲಾಂಟ್ ಸ್ಥಾಪಿಸಿರುವೆ.





## ದಿವ್ಯಾಂಗರಿಗೆ ಟ್ರೈಸೈಕಲ್ ಮತ್ತು ಇತರೆ ಆರೋಗ್ಯ ಸೌಲಭ್ಯಗಳು

ಕ್ಷೇತ್ರದಲ್ಲಿನ ದಿವ್ಯಾಂಗರಿಗಾಗಿ **110 ಬ್ಯಾಟರಿ ಚಾಲಿತ ವಾಹನ, 137 ಮೂರು ಚಕ್ರದ ಸೈಕಲ್, 600 ಕನ್ನಡಕ,** ಇಯರಿಂಗ್ ಹೆಡ್ಸ್ ನೀಡಲಾಗಿದೆ. ಕೈ ಕಾಲು ಕಟ್ ಆದವರಿಗೆ ಕೃತಕ ಕೈ ಕಾಲು ಜೋಡಣೆ ಮಾಡಿಸಿರುವೆ.

## ಮೋಸದಿಂದ ಹೊರದೇಶಗಳಲ್ಲಿ ನಮ್ಮ ಜನತೆ ತೊಂದರೆಯಲ್ಲಿ ಸಿಲುಕಿದಾಗ

ನಕಲಿ ಏಜೆಂಟ್‌ಗಳ ಮೂಲಕ ವಿದ್ಯಾಭ್ಯಾಸಕ್ಕಾಗಿ, ಉದ್ಯೋಗಕ್ಕಾಗಿ ಹೊರದೇಶಗಳಿಗೆ ಹೋಗಿ ಅಲ್ಲಿ ತೊಂದರೆಗೆ ಸಿಲುಕಿದ ನನ್ನ ಕ್ಷೇತ್ರದ 100ಕ್ಕೂ ಹೆಚ್ಚು ಜನರಿಗೆ ಮರಳಿ ಕ್ಷೇತ್ರಕ್ಕೆ ಕರೆ ತಂದಿರುವೆ.

ಕೋವಿಡ್ ಸಂದರ್ಭದಲ್ಲಿ ಕುವೈತ್‌ನಲ್ಲಿ ಸಿಕ್ಕಿಬಿದ್ದಾಗ, ನಿರಂತರ ವಿದೇಶಾಂಗ ಸಚಿವಾಲಯದ ಜೊತೆ ಸಂಪರ್ಕದಲ್ಲಿದ್ದು, ನಮ್ಮ ಯುವಕರನ್ನು ಸುರಕ್ಷಿತವಾಗಿ ಮರಳಿ ದೇಶಕ್ಕೆ ಕರೆತಂದಿರುವೆ.





bhagwanthkhuba   bhagwantkhuba




## ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಸಮಾರಂಭ

ಬೀದರಿ ಕಲೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ **ಶ್ರೀ ಶಾಹ್ ರಶೀದ್ ಅಹಮದ್ ಖಾದ್ರಿ** ಯವರಿಗೆ, ದೇಶದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ದೊರಕಿರುವ ಹಿನ್ನಲೆಯಲ್ಲಿ ಬೀದರ್ ನಗರದಲ್ಲಿ ಪದ್ಮಶ್ರೀ ಪುರಸ್ಕೃತರಿಗಾಗಿ ಕಾರ್ಯಕ್ರಮವನ್ನು ಆಯೋಜನೆ ಮಾಡಿ ಸನ್ಮಾನಿಸಿ ಗೌರವಿಸಿದೆ.



## ಹುಲಸೂರ ತಾಲೂಕಿಗೆ ಹಳ್ಳಿಗಳ ಸೇರ್ಪಡೆಗೆ ಹಗಲಿರುಳು ಶ್ರಮಿಸಿರುವೆ

ಹುಲಸೂರ ತಾಲ್ಲೂಕಿನಲ್ಲಿ ಭಾಲ್ಕಿ ತಾಲ್ಲೂಕಿನ ಸಾಯಿಗಾಂವ, ಪಾಂಡ್ರಿ, ಅಳವಾಯಿ, ಯಲ್ಲಮ್ಮವಾಡಿ, ಅಟ್ಟರ್ಗಾ, ಮಾಣಿಕೇಶ್ವರ, ಗುಂಜರಗಾ, ಶ್ರೀಮಾಳಿ, ತೂಗಾಂವ (ಎಚ್), ಕೇಸರಜವಳಗಾ, ಮೇಹಕರ್, ಬೋಳೆಗಾಂವ್, ನಾರದಾಸಂಗಮ, ವಾಂಜರಖೇಡ, ಜಾಮಖಂಡಿ ಮತ್ತು ಕೊಂಗಳಿ ಗ್ರಾಮಗಳು ಸೇರಿವೆ. ಹಾಗೂ ಹುಮನಾಬಾದ್ ತಾಲ್ಲೂಕಿನ ಘಾಟಬೋರಾಳ, ಜಾಮನಗರ ಮತ್ತು ಘಾಟಬೋರಾಳ ತಾಂಡಾ ಒಟ್ಟು 19 ಹೊಸ ಗ್ರಾಮಗಳು ಸೇರಿರುತ್ತವೆ.

## ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ

ಕ್ಯಾನ್ಸರ್, ಕಿಡ್ನಿ, ಹೃದಯ ಸಂಬಂಧಿ ಕಾಯಿಲೆ, ಲಿವರ್ ಸಮಸ್ಯೆಯಿದ್ದ ಜನರಿಗೂ ಸಹ ಪ್ರಧಾನಮಂತ್ರಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಹಾಗೂ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಇಲ್ಲಿಯವರೆಗೆ **3 ಕೋಟಿಗೂ** ಅಧಿಕ ಪರಿಹಾರವನ್ನು ಕ್ಷೇತ್ರದ ಜನರಿಗೆ ನೀಡಿದ್ದೇನೆ.






# ಧರ್ಮ, ದೇಶ ಮತ್ತು ಸಂಸ್ಕೃತಿಯ ಉಳಿವಿಗಾಗಿ

ದೇಶದಲ್ಲಿ ಸನ್ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿಯವರು ಅಧಿಕಾರ ಸ್ವೀಕರಿಸಿದ ಮೇಲೆ, ಭಾರತದ ಭವ್ಯ ಪರಂಪರೆ, ಶ್ರೇಷ್ಠ ಸಂಸ್ಕೃತಿ ವಿಶ್ವದೆಲ್ಲೆಡೆ ಪಸರಿಸಿದೆ, ಎಲ್ಲಾ ದೇಶಗಳು ನಮ್ಮ ಸಂಸ್ಕೃತಿಯನ್ನು ಹಿಂಬಾಲಿಸುತ್ತಿವೆ, ನಮ್ಮ ಆಚರಣೆಗಳಿಗೆ ಗೌರವಿಸುತ್ತಿವೆ, ಯೋಗಾಸನಕ್ಕೆ **ವಿಶ್ವದ 180ಕ್ಕೂ ಹೆಚ್ಚು** ದೇಶಗಳು ಒಪ್ಪಿಗೆ ಸೂಚಿಸಿ, ರಾಷ್ಟ್ರೀಯ ಯೋಗ ದಿನಾಚಾರಣೆ ಮಾಡುವಲ್ಲಿ ಯಶಸ್ವಿಯಾದೆವು.

## ಕ್ಷೇತ್ರದ ಮಠ ಮಾನ್ಯಗಳಿಗೆ ಅನುದಾನ



ಬೀದರ್ ಕ್ಷೇತ್ರದ ದೇವಸ್ಥಾನಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ **ರೂ. 14 ಕೋಟಿ 95 ಲಕ್ಷ** ಅನುದಾನ ಮಂಜೂರಾತಿ ಮಾಡಿಸಲಾಗಿದೆ. ಅಯೋಧ್ಯೆಯ ರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಮಂದಿರ, ಸೋಮನಾಥ ದೇವಾಲಯ, ಅಹಲ್ಯಾಬಾಯಿ ಹೊಳ್ಕರ್ ಸ್ಮಾರಕ, ಹೈದರಾಬಾದ್‌ನಲ್ಲಿ ರಾಮಾನುಜಾಚಾರ್ಯರ ಸ್ಮಾರಕ ಹಾಗೂ ಇತರೆ ಮಠ ಮಂದಿರಗಳು, ಇತ್ಯಾದಿಗಳು ಅಭಿವೃದ್ಧಿಗೊಳಿಸಲಾಯಿತು.

**ಅಯೋಧ್ಯೆಯ ರಾಮಮಂದಿರ ನಿರ್ಮಾಣಕ್ಕಾಗಿ ಕ್ಷೇತ್ರದ ಮುಸ್ಲಿಂ ಬಂಧುಗಳಿಂದಲೂ ದೇಣಿಗೆಯನ್ನು ಸಂಗ್ರಹಿಸಲಾಯಿತು.**



ಕಾಶಿ ಪೀಠದ ನೂತನ ಜಗದ್ಗುರುಗಳ ಪೀಠಾರೋಹಣ ಸಮಾರಂಭದಲ್ಲಿ ಭಾಗಿ.

## ಪ್ರಸಾದ ಯೋಜನೆಯಡಿ ಪಾಪನಾಶ ದೇವಾಲಯದ ಅಭಿವೃದ್ಧಿ

ಪ್ರಸಾದ್ ಯೋಜನೆಯಡಿ ಬೀದರ್ ನಗರದ ಪಾಪನಾಶ ದೇವಸ್ಥಾನದ ಅಭಿವೃದ್ಧಿಗೆ **ರೂ. 5** ಕೋಟಿ ಅನುದಾನ ಮಂಜೂರಾಗಿದೆ. ಇದರಲ್ಲಿ 20 ಕೊಠಡಿಗಳು, ಬಹೂಪಯೋಗಿ ಸಭಾಂಗಣ, ವೈಟಿಂಗ್ ಹಾಲ್, ಮಾಹಿತಿ ಕೇಂದ್ರ, ಶೌಚಾಲಯಗಳು ಹಾಗೂ ಮುಂತಾದ ಸೌಕರ್ಯಗಳನ್ನು ನಿರ್ಮಿಸಲಾಗುವುದು.



## ಯಶಸ್ವಿ ಗಾಂಧಿ ಸಂಕಲ್ಪ ಯಾತ್ರೆ



ಗಾಂಧಿಜಿಯವರ 150ನೇ ಜನ್ಮದಿನದ ನಿಮಿತ್ಯ 9 ದಿನಗಳಲ್ಲಿ 112 ಹಳ್ಳಿಗಳಲ್ಲಿ ಪಾದಯಾತ್ರೆ ನಡೆಸಿ, ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರ ಜೀವನ ಚರಿತ್ರೆ, ಸ್ವಾತಂತ್ರ್ಯಕ್ಕಾಗಿ ಅವರ ತ್ಯಾಗ, ಆದರ್ಶಗಳ ಕುರಿತಾದ ಗಾಂಧಿ ಸಂಕಲ್ಪ ಯಾತ್ರೆಯ ಮೂಲಕ ಜನರಿಗೆ ತಿಳಿಸಿ, ವರದಿಯನ್ನು ಮಾನ್ಯ ಪ್ರಧಾನಮಂತ್ರಿಗಳಿಗೆ ಸಲ್ಲಿಸಲಾಯಿತು.





bhagwanthkhuba bhagwantkhuba

9 ವರ್ಷಗಳು



# ಧರ್ಮ, ದೇಶ ಮತ್ತು ಸಂಸ್ಕೃತಿಯ ಉಳಿವಿಗಾಗಿ

ಕ್ಷೇತ್ರದ ಜನರು ದೇಶ ಕಾಯುವ ಕಾಯಕದಲ್ಲಿಯೂ ತೊಡಗಿರುವುದು ಹೆಮ್ಮೆಯ ವಿಷಯವಾಗಿದೆ, ಈ ನಿಟ್ಟಿನಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಅವರಿಗೆ, ಅವರ ಕುಟುಂಬದವರಿಗೆ ಭೇಟಿಯಾಗಿ ಅವರ ಅಪ್ತಸಮಾಲೋಚನೆ ನಡೆಸಿ, ಅವರ ಕಷ್ಟದಲ್ಲಿ ಭಾಗಿಯಾಗಿದ್ದೇನೆ.



## ಸ್ವಾತಂತ್ರ್ಯ ಭಾರತದ ಆಜಾದಿ ಕಾ ಅಮೃತ ಮಹೋತ್ಸವ

ದೇಶವು ಸ್ವಾತಂತ್ರ್ಯ ಪಡೆದು 75 ವರ್ಷಗಳು ಕಳೆದಿರುವ ಹಿನ್ನಲೆಯಲ್ಲಿ ಕ್ಷೇತ್ರದಾದ್ಯಂತ ಆಜಾದಿ ಕಾ ಅಮೃತ ಮಹೋತ್ಸವ ಸಂಭ್ರಮಾಚರಣೆಯನ್ನು ಆಚರಿಸಲಾಯಿತು.





## ವಿವಿಧ ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವಿಕೆ

ಬಜರಂಗದಳೊಂದಿಗೆ ಹನುಮಾನ್ ಚಾಲಿಸಾ ಪಠಣ ಮಾಡಿ ಶಕ್ತಿ ಮತ್ತು ಆಸ್ಥಾ ತೋರಿಸಲಾಯಿತು.

ಮುಂಬೈನಲ್ಲಿ ಆಯೋಜಿಸಿದ್ದ ಬಸವ ಜಯಂತಿ ಉತ್ಸವದಲ್ಲಿ ಪಾಲ್ಗೊಂಡು, ಬಸವಣ್ಣನವರ ಸಂದೇಶ ಜನರಿಗೆ ತಲುಪಿಸಲಾಯಿತು.





ಯೋಧನ ನೆರವಿಗೆ ಕೇಂದ್ರ ಸರ್ಕಾರ

## ದೇಶ ಕಾಯುವ ಯೋಧರೊಂದಿಗೆ

ಪುಲ್ವಾಮಾ ದಾಳಿಯಲ್ಲಿ ಗಾಯಗೊಂಡಿದ್ದ ವೀರಪುತ್ರ ಶ್ರೀ ಮನೋಹರರಾವ ಕಾಶಿನಾಥ ರಾಠೋಡ ಮತ್ತು ಕುಟುಂಬದವರಿಗೆ ಸನ್ಮಾನಿಸಲಾಯಿತು.

ಆಳಂದ ತಾಲ್ಲೂಕಿನ ಹಿರೋಳಿಯ ಯೋಧ ವಾಡೇದ ಅವರ ಆರೋಗ್ಯ ವಿಚಾರಿಸಿ ಸನ್ಮಾನಿಸಲಾಯಿತು.



# ಅಂಚೆ ಸಿಬ್ಬಂದಿಯ ವೇತನ ಹೆಚ್ಚಳದಲ್ಲಿ ಯಶಸ್ವಿ

ಗ್ರಾಮೀಣ ಅಂಚೆ ಸೇವಕರ ಮೂಲ ವೇತನ ಹೆಚ್ಚಳ, ಖೂಬಾ ಹರ್ಷ

## ಸಂಸದರನ್ನು ಸತ್ಕರಿಸಿದ ಅಂಚೆ ಸಿಬ್ಬಂದಿ



ಬೀದರ್‌ನಲ್ಲಿ ಸಂಸದ ಭಗವಂತ ಖೂಬಾ ಅವರನ್ನು ಅಂಚೆ ಸಿಬ್ಬಂದಿ ಸತ್ಕರಿಸಿ, ಗೌರವಿಸಿದರು.

**ವಿಶ್ವವಾಣಿ ಸುದ್ದಿಮನೆ** ಬೀದರ್

ಗ್ರಾಮೀಣ ಅಂಚೆ ಸೇವಕರ ಮೂಲ ವೇತನವನ್ನು ಮೂರು ಪಟ್ಟು ಹೆಚ್ಚಳ ಮಾಡಿರುವುದು ಹರ್ಷದ ಸಂಗತಿ ಎಂದು ಸಂಸದ ಭಗವಂತ ಖೂಬಾ ತಿಳಿಸಿದ್ದಾರೆ.

ಗ್ರಾಮೀಣ ಅಂಚೆ ಸೇವಕರು ಕಷ್ಟದಲ್ಲಿರುವ ವಿಷಯ ತಿಳಿದ ನಂತರ ಈ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದೆ. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಿಬ್ಬಂದಿಯ ವೇತನವನ್ನು ಹೆಚ್ಚಿಸುವಂತೆ ಪ್ರಧಾನಿಯವರನ್ನು ಒತ್ತಾಯಿಸಿದ್ದೆ, ಪ್ರಧಾನಿಯವರು ಈ ಬೇಡಿಕೆಗೆ ಸ್ಪಂದಿಸುರುವುದು ಹರ್ಷದ ಸಂಗತಿ ಎಂದು ಖೂಬಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಸಂಪರ್ಕದ ಜೀವನಾಡಿ ಆಗಿರುವ ಅಂಚೆ ಇಲಾಖೆ ಸಿಬ್ಬಂದಿ ಬರೀ ಪತ್ರಗಳನ್ನಷ್ಟೇ ವಿತರಿಸುತ್ತಿಲ್ಲ, ಅಂಚೆ ಕಚೇರಿಗಳೂ ಬದಲಾಗಿವೆ. ಬ್ಯಾಂಕ್ ಆಗಿ, ಉಳಿತಾಯ ಸಂಸ್ಥೆಯಾಗಿ ಬದಲಾಗಿವೆ. ವಿವಿಧ ಯೋಜನೆಗಳ ಧನಸಹಾಯವನ್ನು ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನೂ ಮಾಡುತ್ತಿವೆ. ಹೀಗಾಗಿ ಗ್ರಾಮೀಣ ಅಂಚೆ ಸೇವಕರ ಬೇಡಿಕೆಗೆ ಸ್ಪಂದಿಸಬೇಕು ಎಂದು 2015 ರ ಮಾರ್ಚ್ 18 ರಂದು ನಡೆದ ಅಧಿವೇಶನದಲ್ಲಿ ಪ್ರಧಾನಿಯವರನ್ನು ಒತ್ತಾಯಿಸಿದೆ ಎಂದು ಸಂಸದ ಖೂಬಾ ಸ್ಮರಿಸಿದ್ದಾರೆ.ಈ ಕುರಿತ ಚರ್ಚೆಯ ನಂತರ ವಿಷಯದ ಮಹತ್ವ ಅರಿತ ಪ್ರಧಾನಿಯವರು ಇದಕ್ಕಾಗಿ ಕಮಲೇಶಚಂದ್ರ ಸಮಿತಿ ರಚಿಸಿದ್ದರು. ಸಮಿತಿಯ ಶಿಫಾರಸಿನಂತೆ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಗ್ರಾಮೀಣ ಅಂಚೆ ಸೇವಕರ ವೇತನವನ್ನು ಮೂರು ಪಟ್ಟು ಹೆಚ್ಚಿಸಲು ನಿರ್ಧಾರ ಸಲಾಗಿದೆ. ಇದೊಂದು ಮಹತ್ವದ ತೀರ್ಮಾನವಾಗಿದೆ ಎಂದು ಸಂಸದರು ಶ್ಲಾಘಿಸಿದ್ದಾರೆ.

ಕೇಂದ್ರ ಸರಕಾರದ ಈ ತೀರ್ಮಾನದಿಂದಾಗಿ ರಾಷ್ಟ್ರದ ಎಲ್ಲ ಅಂಚೆ ನೌಕರರಿಗೆ ಅನುಕೂಲವಾಗಲಿದೆ. 2016 ರಿಂದ ಜಾರಿಗೊಂಡ 7 ನೇ ವೇತನ ಆಯೋಗದ ಪೂರ್ವಾನ್ವಯ ವೇತನ ಬಾಕಿ ಹಣ ಸಹ ಸಿಗಲಿದೆ. ವಾರ್ಷಿಕ ಶೇ. 4 ರಷ್ಟು ವೇತನ ಹೆಚ್ಚಳದ ಲಾಭವೂ ಸಿಗಲಿದೆ. ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ 3.7 ಲಕ್ಷ ಅಂಚೆ ನೌಕರರಿಗೆ ಕೇಂದ್ರದ ತೀರ್ಮಾನದಿಂದ ಅನುಕೂಲವಾಗಲಿದೆ. ಇಂತಹದ್ದೊಂದು ಮಹತ್ವದ ತೀರ್ಮಾನ ಕೈಗೊಂಡು ಅನುಕೂಲ ಮಾಡಿಕೊಟ್ಟ ಪ್ರಧಾನಿಯವರನ್ನು ಅಭಿನಂದಿಸಲಾಗುತ್ತದೆ ಎಂದು ಸಂಸದರು ತಿಳಿಸಿದ್ದಾರೆ.

### ಖೂಬಾ ಅವರ ಶ್ರಮವಿದೆ

ಗ್ರಾಮೀಣ ಅಂಚೆ ನೌಕರರ ಸಮಸ್ಯೆಯನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿ, ಪರಿಹಾರ ದೊರಕಿಸಿಕೊಟ್ಟ ಹಿನ್ನೆಲೆಯಲ್ಲಿ ಇಲ್ಲಿನ ಅಂಚೆ ನೌಕರರು ಸಂಸದ ಭಗವಂತ ಖೂಬಾ ಅವರನ್ನು ಸತ್ಕರಿಸಿ ಗೌರವಿಸಿದರು. ಸಂಸದರ ಗೃಹ ಕಚೇರಿಗೆ ತೆರಳಿದ ಅಂಚೆ ಸಿಬ್ಬಂದಿ, ಕೇಂದ್ರ ಸರಕಾರದ ತೀರ್ಮಾನ ಕುರಿತು ಹರ್ಷ ವ್ಯಕ್ತಪಡಿಸಿದರು. ಕೇಂದ್ರದ ತೀರ್ಮಾನದಲ್ಲಿ ಸಂಸದರ ಶ್ರಮವೂ ಇದೆ ಎಂದು ಕೊಂಡಾಡಿದರು.

ಗ್ರಾಮೀಣ ಅಂಚೆ ಸೇವಕರು ಕಷ್ಟದಲ್ಲಿರುವ ವಿಷಯ ತಿಳಿದ ನಂತರ ಈ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದೆ. ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಿಬ್ಬಂದಿಯ ವೇತನವನ್ನು ಹೆಚ್ಚಿಸುವಂತೆ ಪ್ರಧಾನಿಯವರನ್ನು ಒತ್ತಾಯಿಸಿದ್ದೆ. ಪ್ರಧಾನಿಯವರು ಈ ಬೇಡಿಕೆಗೆ ಸ್ಪಂದಿಸುರುವುದು ಹರ್ಷದ ಸಂಗತಿ.

**ಸಂಸದ ಭಗವಂತ ಖೂಬಾ**

ನಾನು ಮೊದಲ ಬಾರಿಗೆ ಸಂಸದನಾದ ಮೇಲೆ ಸಂಸತ್ತಿನ ಅಧಿವೇಶನದಲ್ಲಿ ಅಂಚೆ ಸಿಬ್ಬಂದಿಗಳ ವೇತನ ಹೆಚ್ಚಳ ಕುರಿತು ಮಾತನಾಡಿ ಮಾನ್ಯ ಪ್ರಧಾನಮಂತ್ರಿಗಳಿಗೆ ಹಾಗೂ ಘನ ಸರ್ಕಾರಕ್ಕೆ ವಿನಂತಿಸಿಕೊಂಡಿರುತ್ತೇನೆ. ನನ್ನ ಮನವಿಗೆ ಸ್ಪಂದಿಸಿದ ಸನ್ಮಾನ್ಯ ಪ್ರಧಾನಮಂತ್ರಿಗಳು ಹಾಗೂ ನಮ್ಮ ಸರ್ಕಾರ ಅಂಚೆ ಸಿಬ್ಬಂದಿಗಳ ವೇತನವನ್ನು ಮೂರು ಪಟ್ಟು ಹೆಚ್ಚಳ ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ ನನ್ನ ಕ್ಷೇತ್ರದ ಅಂಚೆ ಸಿಬ್ಬಂದಿಗಳು ನನ್ನನ್ನು ಸನ್ಮಾನಿಸುವ ಮೂಲಕ ದೇಶದ ಪ್ರಧಾನಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಧನ್ಯವಾದಗಳನ್ನು ತಿಳಿಸಿದರು.



ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಟಗಾರರಾದ ವೀರ್ ಸಾವರ್ಕರ್ ರವರಿಗೆ, ಅಂಡಮಾನ್ ನಿಕೋಬಾರ್ ದ್ವೀಪದ ಕಾಲಾಪಾನಿ ಸೆರೆವಾಸದಲ್ಲಿ ಇಡಲಾಗಿತ್ತು, ಆ ಪುಣ್ಯಭೂಮಿಗೆ ( ರಾಷ್ಟ್ರೀಯ ಸ್ಮಾರಕಕ್ಕೆ) ಕುಟುಂಬದೊಂದಿಗೆ ತೆರಳಿ ಗೌರವ ಸಲ್ಲಿಸಿದ ಕ್ಷಣಗಳು



ಕೇಂದ್ರದಲ್ಲಿ ಸಚಿವನಾದ ಮೇಲೆ ಪ್ರಥಮವಾಗಿ ಕ್ಷೇತ್ರಕ್ಕೆ ಬಂದಾಗ ನನ್ನ ಪೂಜ್ಯ ತಾಯಿಯವರ ಸಮಾಧಿಯ ದರ್ಶನ ಪಡೆದುಕೊಂಡ ಸಂದರ್ಭ

# ಸ್ವಾತಂತ್ರ್ಯ ಭಾರತದಲ್ಲಿ ಜಿಲ್ಲೆಯಿಂದ ಮೊಟ್ಟ ಮೊದಲ ಬಾರಿಗೆ ಕೇಂದ್ರದಲ್ಲಿ ಸಚಿವನಾಗಿ

ನಮ್ಮ ಜಿಲ್ಲೆಯ ಒಬ್ಬ ರೈತನ ಮಗ, ಇಂದು ತನ್ನ ಕಾಯಕ ನಿಷ್ಠೆ, ಪ್ರಾಮಾಣಿಕತೆಯಿಂದ, ವಿಶ್ವವೇ ಮೆಚ್ಚಿದ ನಾಯಕ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜಿಯವರ ಸಂಪುಟದಲ್ಲಿ ಸಚಿವನಾಗಿ ಕಾರ್ಯ ನಿರ್ವಹಿಸುತ್ತಿರುವುದು ತಾವೆಲ್ಲರೂ ಹೆಮ್ಮೆ ಪಡುತ್ತೀರಿ ಎಂದು ಭಾವಿಸಿದ್ದೇನೆ. ಕ್ಷೇತ್ರಕ್ಕೆ ಮತ್ತು ತಮ್ಮೆಲ್ಲರ ವಿಶ್ವಾಸಕ್ಕೆ ತಕ್ಕಂತೆ ನಾನು ನಡೆದುಕೊಳ್ಳುತ್ತಿದ್ದೇನೆ. ನನ್ನ ಇತಿ ಮಿತಿಯಲ್ಲಿ ಬರುವ ಎಲ್ಲಾ ಕೆಲಸಗಳ ತಮ್ಮೆಲ್ಲರಿಗಾಗಿ ಸಂಸದನಾಗಿ ನಿಮ್ಮೆಲ್ಲರ ಸೇವೆ, ಕೇಂದ್ರ ಸಚಿವನಾಗಿ ದೇಶ ಸೇವೆ ಮಾಡುತ್ತಿರುವೆ.

ಕೇಂದ್ರ ಸಚಿವನಾಗಿ ದೇಶದ ಏಳಿಗೆಗೆ ನನ್ನಿಂದ ನೀಡಿರುವ ಸಲಹೆಗಳು, ಮಾಡಿರುವ ಕಾರ್ಯಗಳ ಬಗ್ಗೆ ತಮ್ಮ ಮಾಹಿತಿಗಾಗಿ ಕೆಲವೊಂದು ವಿಷಯುಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ.

# ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ

## ಪ್ರಮುಖ ಸಾಧನೆಗಳು

ಕೇಂದ್ರ ನೂತನ ಹಾಗೂ ನವೀಕರಿಸಬಹುದಾದ ಇಂಧನ ಮೂಲ ಸಚಿವಾಲಯದಿಂದ ಜಿಲ್ಲೆಗೆ 500 MW ಸಾಮರ್ಥ್ಯದ ಸೋಲಾರ್ ಪಾರ್ಕ್ ಮತ್ತು 2.5 MW ಸಾಮರ್ಥ್ಯದ ಸಬ್ ಸ್ಟೇಷನ್ ಮಂಜೂರಿಯಾಗಿರುತ್ತದೆ.

ಈಗಾಗಲೇ KREDL ಸಂಸ್ಥೆ ಪಾರ್ಕ ಹಾಗೂ ಸಬ್ ಸ್ಟೇಷನ್ ಪ್ರಾರಂಭಕ್ಕಾಗಿ ಜಮೀನು ಲೀಸ್ ಮೇಲೆ ಪಡೆದುಕೊಳ್ಳುವ ಉದ್ದೇಶದಿಂದ ಔರಾದ್ ತಾಲೂಕಿನಲ್ಲಿ ಜಮೀನುಗಳ ವೀಕ್ಷಣೆ ನಡೆಸುತ್ತಿದೆ.

ಔರಾದ್ ತಾಲ್ಲೂಕಿನ ಜನತೆ ನಿವೇಶನ ನೀಡಲು ಆಸಕ್ತಿ ತೋರುತ್ತಿರುವುದು ಸಂತೋಷದ ವಿಷಯವಾಗಿದೆ.

ಈ ಎರಡು ಯೋಜನೆ 2024 ಮೇನಲ್ಲಿ ಪೂರ್ತಿಗೊಳ್ಳಲಿದೆ. ಇದರಿಂದ ಜಿಲ್ಲೆಯಲ್ಲಿ ಉದ್ಯೋಗವಕಾಶ ಹೆಚ್ಚಲಿದೆ ಮತ್ತು ನಿವೇಶಕರಿಗೆ ಲಾಭ ತಂದುಕೊಡಲಿವೆ.

1. COP26ನಲ್ಲಿ ಗೌರವಾನ್ವಿತ ಪ್ರಧಾನಮಂತ್ರಿಯವರ 500 GW ಸ್ಥಾಪಿತ ವಿದ್ಯುತ್ ಸಾಮರ್ಥ್ಯದ ಘೋಷಣೆಗೆ ಅನುಗುಣವಾಗಿ, 30.04.2023ರಂತೆ ದೇಶದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ಒಟ್ಟು 172.54 GW ಸಾಮರ್ಥ್ಯವನ್ನು ಸ್ಥಾಪಿಸಲಾಗಿದೆ. ಇದು 67.08 GW ಸೌರಶಕ್ತಿ, 46.85 GW ದೊಡ್ಡ ಜಲವಿದ್ಯುತ್, 42.87 GW ಪವನಶಕ್ತಿ, 10.80 GW ಜೈವಿಕ–ವಿದ್ಯುತ್ ಮತ್ತು 4.94 GW ಸಣ್ಣ ಜಲವಿದ್ಯುತ್ ಸಾಮರ್ಥ್ಯವನ್ನು ಒಳಗೊಂಡಿದೆ. ಇದು ದೇಶದ ಒಟ್ಟು ಸ್ಥಾಪಿತ ಉತ್ಪಾದನಾ ಸಾಮರ್ಥ್ಯದ (416.59 GW) 41.42% ಪಾಲನ್ನು ಹೊಂದಿದೆ.





2. ಭಾರತವು ನವೀಕರಿಸಬಹುದಾದ ಇಂಧನ ಸ್ಥಾಪಿತ ಸಾಮರ್ಥ್ಯದಲ್ಲಿ ಜಾಗತಿಕವಾಗಿ 4ನೇ ಸ್ಥಾನದಲ್ಲಿದೆ (ದೊಡ್ಡ ಹೈಡ್ರೋ ಸೇರಿದಂತೆ) ಪವನ ಶಕ್ತಿ ಸಾಮರ್ಥ್ಯದಲ್ಲಿ 4ನೇ ಮತ್ತು ಸೌರ ಶಕ್ತಿ ಸಾಮರ್ಥ್ಯದಲ್ಲಿ 5ನೇ ಸ್ಥಾನದಲ್ಲಿದೆ.

# ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ

## ಪ್ರಮುಖ ಸಾಧನೆಗಳು

3. ನವೀಕರಿಸಬಹುದಾದ ಇಂಧನ ಸ್ಥಾಪಿತ ಸಾಮರ್ಥ್ಯವು ಜುಲೈ 2021ರಲ್ಲಿ 144.77 GW ನಿಂದ ಏಪ್ರಿಲ್ 2023 ರಲ್ಲಿ 172.54 GW ಗೆ ಹೆಚ್ಚಾಗಿದೆ. ಸೌರಶಕ್ತಿ ಸ್ಥಾಪಿತ ಸಾಮರ್ಥ್ಯವು ಜುಲೈ 2021 ರಲ್ಲಿ 43.61 GW ನಿಂದ ಏಪ್ರಿಲ್ 2023ರಲ್ಲಿ 67.08 GW ಗೆ ಹೆಚ್ಚಾಗಿದೆ. ಪವನಶಕ್ತಿ ಸ್ಥಾಪಿತ ಸಾಮರ್ಥ್ಯವು ಜುಲೈ 2021 ರಲ್ಲಿ 39.49 GW ನಿಂದ ಏಪ್ರಿಲ್ 2023 ರಲ್ಲಿ 42.87 GW ಗೆ ಹೆಚ್ಚಾಗಿದೆ.



4. RE ಉತ್ಪಾದನೆ (ದೊಡ್ಡ ಹೈಡ್ರೊ ಸೇರಿದಂತೆ) 2014–15 ರಲ್ಲಿ 190.88 BU ನಿಂದ 2022–23ರಲ್ಲಿ 365.60 BU ಗೆ (ಮಾರ್ಚ್, 2023 ವರೆಗೆ) ಹೆಚ್ಚಾಗಿದೆ.

5. 2014 ರಿಂದ ಸುಮಾರು $78 ಬಿಲಿಯನ್ ಹೂಡಿಕೆ ($10.3 ಬಿಲಿಯನ್ FDI ಸೇರಿದಂತೆ)

6. ಬೀದರ್ ಜಿಲ್ಲೆಯಲ್ಲಿ 460 MW ನವಿಕರಿಸಬಹುದಾದ ಸ್ಥಾಪಿತ ಸಾಮರ್ಥ್ಯ ಇದ್ದು, ಜುಲೈ 2021 ರಿಂದ ಏಪ್ರಿಲ್ 2023 ರವರೆಗೆ 1661 MU RE ಉತ್ಪಾದನೆ ಆಗಿದೆ.

7. ಆತ್ಮನಿರ್ಭರ ಭಾರತ:



ಎ) ಹೆಚ್ಚಿನ ದಕ್ಷತೆಯ ಸೌರ PV ಮಾಡ್ಯೂಲ್‌ಗಳಿಗಾಗಿ ಉತ್ಪಾದನಾ ಲಿಂಕ್ಡ್ ಇನ್ಸೆಂಟಿವ್ (PLI) ಯೋಜನೆ : ರೂ. 24,000 ಕೋಟಿಗಳಲ್ಲಿ ಈ ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಟ್ರ್ಯಾಂಚ್–I ಅಡಿಯಲ್ಲಿ 8,737 MW ಉತ್ಪಾದನಾ ಸಾಮರ್ಥ್ಯವು ಸುಮಾರು ನವೆಂಬರ್/ಡಿಸೆಂಬರ್, 2024 ರೊಳಗೆ ಕಾರ್ಯಾರಂಭಿಸಲು ನಿಗದಿಪಡಿಸಲಾಗಿದೆ. ಟ್ರ್ಯಾಂಚ್–II ಅಡಿಯಲ್ಲಿ, 39,600 MW ಸೌರ PV ಮಾಡ್ಯೂಲ್ ಉತ್ಪಾದನಾ ಸಾಮರ್ಥ್ಯವು ಅಕ್ಟೋಬರ್ 2024ರಿಂದ ಏಪ್ರಿಲ್ 2026ರ ನಡುವೆ ಕಾರ್ಯಾರಂಭಿಸಲು ನಿರ್ಧರಿಸಲಾಗಿದೆ.

ಬಿ) ಪವನ ಶಕ್ತಿ ಕ್ಷೇತ್ರದಲ್ಲಿ ಮೇಕ್ ಇನ್ ಇಂಡಿಯಾ




8. ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್:

2023 ರ ಜನವರಿ 4 ರಂದು, 2029–30 ರವರೆಗಿನ 19,744 ಕೋಟಿಗಳ ಆರಂಭಿಕ ವೆಚ್ಚದೊಂದಿಗೆ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಅನ್ನು ಕೇಂದ್ರ ಸಚಿವ ಸಂಪುಟವು ಅನುಮೋದಿಸಿತು. 2030ರ ವೇಳೆಗೆ, ಸುಮಾರು 125 GWನ ನವೀಕರಿಸಬಹುದಾದ ಶಕ್ತಿ ಸಾಮರ್ಥ್ಯದೊಂದಿಗೆ ವಾರ್ಷಿಕ ಹಸಿರು ಹೈಡ್ರೋಜನ್ ಉತ್ಪಾದನಾ ಸಾಮರ್ಥ್ಯವನ್ನು ಕನಿಷ್ಠ 5 MMT (ಮಿಲಿಯನ್ ಮೆಟ್ರಿಕ್ ಟನ್) ಸಾಧಿಸುವ ಗುರಿಯನ್ನು ಮಿಷನ್ ಹೊಂದಿದೆ. ಈ ಅವಶ್ಯಕತೆಯು ಒಟ್ಟು 8 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆ ತರುವ ನಿರೀಕ್ಷೆಯಿದೆ ಮತ್ತು 6 ಲಕ್ಷಕ್ಕೂ ಹೆಚ್ಚು ಉದ್ಯೋಗವನ್ನು ಸೃಷ್ಟಿಸುತ್ತದೆ.

**9. PM-KUSUM: ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್**



ಈ ಯೋಜನೆಯು ಒಟ್ಟು ಕೇಂದ್ರ ಹಣಕಾಸು ವೆಚ್ಚ ರೂ. 34,422 ಕೋಟಿ ಅಡಿಯಲ್ಲಿ 30.80 GW ಸೌರ ಸಾಮರ್ಥ್ಯವನ್ನು ಸೇರಿಸುವ ಗುರಿಯನ್ನು ಹೊಂದಿದೆ. 30.04.2023 ರಂತೆ ಒಟ್ಟು 32.61 ಲಕ್ಷ ಪಂಪ್‌ಗಳನ್ನು ಮಂಜೂರು ಮಾಡಲಾಗಿದೆ ಮತ್ತು ಒಟ್ಟು 2.19 ಲಕ್ಷ ಪಂಪ್‌ಗಳನ್ನು ಅಳವಡಿಸಲಾಗಿದೆ.



**10. ರೂಫ್ ಟಾಪ್ ಸೋಲಾರ್ ಪ್ರೋಗ್ರಾಂ ಹಂತ–II**

30.4.2023ರಂತೆ, ಒಟ್ಟು 8.4 GW ಸೋಲಾರ್ ರೂಫ್ ಟಾಪ್ ಯೋಜನೆಗಳನ್ನು ದೇಶದಲ್ಲಿ ಸ್ಥಾಪಿಸಲಾಗಿದೆ. ರೂಫ್ಟಾಪ್ ಸೋಲಾರ್ ಪ್ರೋಗ್ರಾಂ ಹಂತ–II ಅಡಿಯಲ್ಲಿ ವಸತಿ ವಲಯಕ್ಕೆ 4GW ಗುರಿಯ ವಿರುದ್ಧ, ಈಗಾಗಲೇ 3.4 GW ಹಂಚಿಕೆಯನ್ನು ವಿವಿಧ ರಾಜ್ಯಗಳು/UTಗಳಿಗೆ ಮಾಡಲಾಗಿದೆ ಮತ್ತು 1.9 GW ಅನ್ನು ಸ್ಥಾಪಿಸಲಾಗಿದೆ.

**11. ಗ್ರೀನ್ ಎನರ್ಜಿ ಕಾರಿಡಾರ್: GEC ಹಂತ–I**

ಎ) ಇಂಟ್ರಾ ಸ್ಟೇಟ್ ಟ್ರಾನ್ಸ್ಮಿಷನ್ ಸಿಸ್ಟಮ್ (InSTS)



ಒಟ್ಟು ಯೋಜನೆಯ ಅಂದಾಜು ವೆಚ್ಚ 10,141 ಕೋಟಿಗಳು. 30.04.2023 ರಂತೆ, ರಾಜ್ಯಗಳಿಗೆ ಒಟ್ಟು ಅನುದಾನ ಅಂದಾಜು. ರೂ. 2,536 ಕೋಟಿ ನೀಡಲಾಗಿದೆ. 30.04.2023 ರಂತೆ, 8877 ckm ಪ್ರಸರಣ ಮಾರ್ಗಗಳು ಮತ್ತು 20878 MVA ಸಾಮರ್ಥ್ಯದ ಉಪಕೇಂದ್ರಗಳು ಮತ್ತು ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ತಮಿಳುನಾಡಿನಲ್ಲಿ ಎಲ್ಲಾ ಯೋಜನೆಗಳು ಪೂರ್ಣಗೊಂಡಿವೆ.



ಬಿ) ಅಂತರ–ರಾಜ್ಯ ಪ್ರಸರಣ ವ್ಯವಸ್ಥೆ (ISTS)

ಒಟ್ಟು 3200 ckm ಅಂತರ–ರಾಜ್ಯ ಪ್ರಸರಣ ಮಾರ್ಗಗಳು ಮತ್ತು 17000 MVA ಸಬ್ ಸ್ಟೇಷನ್‌ಗಳೊಂದಿಗೆ ISTS ಯೋಜನೆಯು 2015 ರಿಂದ ಮಾರ್ಚ್ 2020 ರವರೆಗೆ ರೂ 11,369 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ.

ಗ್ರೀನ್ ಎನರ್ಜಿ ಕಾರಿಡಾರ್ ಹಂತ–II ಇಂಟ್ರಾ ಸ್ಟೇಟ್ ಟ್ರಾನ್ಸ್ಮಿಷನ್ ಸಿಸ್ಟಮ್ (InSTS) ಯೋಜನೆಯು ಒಟ್ಟು ರೂ. 12,031.33 ಕೋಟಿ (ಕೇಂದ್ರ ಅನುದಾನ ಯೋಜನಾ ರೂ. 3970.34 ಕೋಟಿ) ವೆಚ್ಚದಲ್ಲಿ ಒಟ್ಟು 27500 ಮೆಗಾ ವೋಲ್ಟ್ ಆಂಪಿಯರ್ (MVA) ಪ್ರಸರಣ ಸಾಮರ್ಥ್ಯದ ಸ್ಥಾಪನೆ ಮತ್ತು 10750 ಸರ್ಕ್ಯೂಟ್ ಕಿಲೋಮೀಟರ್‌ಗಳ (CKM) ಪ್ರಸರಣ ಮಾರ್ಗಗಳನ್ನು ಒಳಗೊಂಡಿದೆ.



# ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವಾಲಯ

## ಪ್ರಮುಖ ಸಾಧನೆಗಳು

### ರಾಸಾಯನಿಕಗಳು ಮತ್ತು ಪೆಟ್ರೋಕೆಮಿಕಲ್ಸ್ ಇಲಾಖೆ




1. **ಪ್ಲಾಸ್ಟಿಕ್ ಪಾರ್ಕ್ ಯೋಜನೆ** : ಯೋಜನೆಯಡಿಯಲ್ಲಿ, ಭಾರತ ಸರ್ಕಾರವು ಯೋಜನಾ ವೆಚ್ಚದ 50% ವರೆಗೆ ಅನುದಾನ ನಿಧಿಯನ್ನು ಒದಗಿಸುತ್ತದೆ. ಈ ಯೋಜನೆಯ ಅಡಿಯಲ್ಲಿ ಮಧ್ಯಪ್ರದೇಶ (ಎರಡು), ಒಡಿಶಾ, ಜಾರ್ಖಂಡ್, ತಮಿಳುನಾಡು, ಉತ್ತರಾಖಂಡ, ಛತ್ತೀಸ್‌ಗಢ, ಅಸ್ಸಾಂ, ಉತ್ತರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ **10 ಪ್ಲಾಸ್ಟಿಕ್ ಪಾರ್ಕ್‌ಗಳನ್ನು** ಅನುಮೋದಿಸಲಾಗಿದೆ. ಈ ಪಾರ್ಕಗಳು ಅನುಷ್ಠಾನದ ವಿವಿಧ ಹಂತಗಳಲ್ಲಿವೆ.

   2021 ಮತ್ತು 2022ರ ಅವಧಿಯಲ್ಲಿ, **3 ಪ್ಲಾಸ್ಟಿಕ್ ಪಾರ್ಕ್‌ಗಳನ್ನು** ಅನುಮೋದಿಸಲಾಗಿದೆ. ಇವುಗಳ ಮೂಲ ವಿವರ ಈ ಕೆಳಗಿನಂತಿದೆ

| ಕ್ರಂ .ಸಂ | ಪ್ಲಾಸ್ಟಿಕ್ ಪಾರ್ಕ್ ಸ್ಥಳ | ಅಂತಿಮ ಅನುಮೋದನೆ ದಿನಾಂಕ | ಒಟ್ಟು ಯೋಜನೆಯ ವೆಚ್ಚ (ರೂ ಕೋಟಿ ) | ಯೋಜನೆಗೆ ಒಟ್ಟು GoI ಬೆಂಬಲವನ್ನು ಅನುಮೋದಿಸಲಾಗಿದೆ (ರೂ ಕೋಟಿ ) | GoI ಬೆಂಬಲವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ (ರೂ ಕೋಟಿ ) |
|---|---|---|---|---|---|
| 1. | ಸರೋರಾ , ರಾಯ್‌ಪುರ, ಛತ್ತೀಸ್‌ಗಢ | ಏಪ್ರಿಲ್, 2021 | 42.09 | 21.045 | 4.21 |
| 2. | ಗಂಜಿಮಠ , ಕರ್ನಾಟಕ | ಜನವರಿ, 2022 | 62.78 | 31.38 | ಶೂನ್ಯ |
| 3. | ಗೋರಖ್‌ಪುರ, ಉತ್ತರ ಪ್ರದೇಶ | ಏಪ್ರಿಲ್, 2022 | 69.58 | 34.79 | ಶೂನ್ಯ |

2. ದೇಶದಲ್ಲಿ ಅಸ್ತಿತ್ವದಲ್ಲಿರುವ ಪೆಟ್ರೋಕೆಮಿಕಲ್ ತಂತ್ರಜ್ಞಾನ ಮತ್ತು ಸಂಶೋಧನೆಯನ್ನು ಸುಧಾರಿಸುವ ಉದ್ದೇಶದಿಂದ, ಮತ್ತು ಪಾಲಿಮರ್‌ಗಳು & ಪ್ಲಾಸ್ಟಿಕ್‌ಗಳ ಹೊಸ ಅಪ್ಲಿಕೇಶನ್‌ಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶದಿಂದ ಗುರುತಿಸಲಾದ ಸಂಶೋಧನಾ ಸಂಸ್ಥೆಗಳಿಗೆ ಕೇಂದ್ರ ಅನುದಾನವನ್ನು ಒದಗಿಸುತ್ತದೆ. ಈ ಯೋಜನೆಯ ಅಡಿಯಲ್ಲಿ, ಭಾರತ ಸರ್ಕಾರವು ಯೋಜನೆಯ ಒಟ್ಟು ವೆಚ್ಚದ ಗರಿಷ್ಠ **50% ನಷ್ಟು 6 ಕೋಟಿ ರೂ.** ಮಿತಿಗೆ ಒಳಪಟ್ಟು 3 ವರ್ಷಗಳ ಅವಧಿಯಲ್ಲಿ ಅನುದಾನ ನೀಡುತ್ತದೆ. ಇಲ್ಲಿಯವರೆಗೆ, ಪ್ರತಿಷ್ಠಿತ ಶೈಕ್ಷಣಿಕ/ ಸಂಶೋಧನಾ ಸಂಸ್ಥೆಗಳ ಆವರಣದಲ್ಲಿ 13 ಉತ್ಕೃಷ್ಟತೆಯ ಕೇಂದ್ರಗಳನ್ನು (CoE) ಅನುಮೋದಿಸಲಾಗಿದೆ ಮತ್ತು ಸ್ಥಾಪಿಸಲಾಗಿದೆ.

   2021 ಮತ್ತು 2022ರ ಅವಧಿಯಲ್ಲಿ, 2 CoE ಗಳನ್ನು ಅನುಮೋದಿಸಲಾಗಿದೆ.



| ಕ್ರ.ಸಂ | CoE ನ ಹೆಸರು | ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ | ದಿನಾಂಕ | ಒಟ್ಟು ಯೋಜನೆಯ ವೆಚ್ಚ (ರೂ ಕೋಟಿ ) | ಯೋಜನೆಗೆ ಒಟ್ಟು GoI ಬೆಂಬಲವನ್ನು ಅನುಮೋದಿಸಲಾಗಿದೆ (ರೂ ಕೋಟಿ ) |
|---|---|---|---|---|---|
| 1. | ಪಾಲಿಮರ್ ಆಟಿಕೆಗಳ ಸಮರ್ಥನೀಯ ಮತ್ತು ನವೀನ ವಿನ್ಯಾಸ ಮತ್ತು ತಯಾರಿಕೆ (ಸುಂದರ್ – ಆಟಿಕೆಗಳು) | ಐಐಟಿ, ಗುವಾಹಟಿ | ಫೆಬ್ರವರಿ, 2022 | 10.59 | 4.99 |
| 2. | ಮೌಲ್ಯವರ್ಧಿತ ಆಟಿಕೆಗಳು ರಬ್ಬರ್ ಮತ್ತು ಅಲೈಡ್ ಸಿದ್ಧಪಡಿಸಿದ ಉತ್ಪನ್ನಗಳಿಗಾಗಿ ವಿನ್ಯಾಸ ಮತ್ತು ಅಭಿವೃದ್ಧಿ | IRMRA, ಥಾಣೆ | ಫೆಬ್ರವರಿ, 2022 | 9.8685 | 4.93 |



## 3. ಜುಲೈ, 2021 ರಿಂದ CIPET ನ ಪ್ರಮುಖ ಚಟುವಟಿಕೆಗಳು



| ಕ್ರ.ಸಂ. | ಕೇಂದ್ರ | ಚಟುವಟಿಕೆ | ದಿನಾಂಕ |
|---|---|---|---|
| 1. | CIPET:CSTS–ವಾರಣಾಸಿ | ಶಂಕುಸ್ಥಾಪನಾ ಸಮಾರಂಭ : CSTS – ವಾರಣಾಸಿ ವಾರಾಣಸಿಯಲ್ಲಿ ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಂದ ನೆರವೇರಿತು | 15–07–2021 |
| 2. | CIPE:IPT–ಜೈಪುರ | CIPET : ಇನ್ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಟೆಕ್ನಾಲಜಿ, ಜೈಪುರ, – ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರಿಂದ ಉದ್ಘಾಟನೆ | 30–09–2021 |
| 3. | CIPET–ವೃತ್ತಿಪರ ತರಬೇತಿ ಕೇಂದ್ರ (VTC) – ಭಾವನಗರ | ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ರಾಸಾಯನಿಕಗಳು ಮತ್ತು ರಸಗೊಬ್ಬರಗಳ ಗೌರವಾನ್ವಿತ ಸಚಿವರಾದ ಡಾ. ಮನ್ಸುಖ್ ಮಾಂಡವಿಯಾ ಅವರಿಂದ ಗುಜರಾತ್‌ನ ಭಾವನಗರದಲ್ಲಿ ವೃತ್ತಿಪರ ತರಬೇತಿ ಕೇಂದ್ರ (VTC). | 31–05–2022 |
| 4. | CIPE:IPT– ಚೆನ್ನೈ | ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ರಾಸಾಯನಿಕಗಳು ಮತ್ತು ರಸಗೊಬ್ಬರಗಳ ಗೌರವಾನ್ವಿತ ಸಚಿವರಾದ ಡಾ. ಮನ್ಸುಖ್ ಮಾಂಡವಿಯಾ ಅವರಿಂದ ಚೆನ್ನೈನ CIPET ನಲ್ಲಿ ತಂತ್ರಜ್ಞಾನ ಕೇಂದ್ರದ ಶಂಕುಸ್ಥಾಪನೆ ಸಮಾರಂಭ | 26–06–2022 |
| 5. | CIPET: CSTS–ಚಂದ್ರಾಪುರ | ಗೌರವಾನ್ವಿತ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿ ಅವರು ನಾಗ್ಪುರದ ಚಂದ್ರಾಪುರದಲ್ಲಿ CIPET : CSTS ನ್ನು ಉದ್ಘಾಟನೆ ಮಾಡಿದರು | 11–12–2022 |


bhagwanthkhuba bhagwantkhuba

4

ಶ್ರೀ ಭಗವಂತ ಖೂಬಾ , ರಾಸಾಯನಿಕಗಳು ಮತ್ತು ರಸಗೊಬ್ಬರಗಳು ಮತ್ತು ಹೊಸ ಮತ್ತು ನವೀಕರಿಸಬಹುದಾದ ಇಂಧನ ರಾಜ್ಯ ಸಚಿವರು 22.08.2022 ರಂದು CIPET: SARP ARSTPS ನಲ್ಲಿ (i) ಟಿಂಕರಿಂಗ್ ಲ್ಯಾಬ್ ಮತ್ತು (ii) ಇನ್ಕ್ಯುಬೇಶನ್ ಲ್ಯಾಬ್ ಅನ್ನು ಉದ್ಘಾಟಿಸಿದರು.

5

ರಾಸಾಯನಿಕಗಳು ಮತ್ತು ರಸಗೊಬ್ಬರಗಳ ಸಚಿವಾಲಯ, ಭಾರತೀಯ ಕೈಗಾರಿಕೆಗಳ ಒಕ್ಕೂಟದ (CII) ಸಹಯೋಗದೊಂದಿಗೆ ರಾಸಾಯನಿಕಗಳು ಮತ್ತು ಪೆಟ್ರೋಕೆಮಿಕಲ್ಸ್ ಇಲಾಖೆಯು 24 ಮೇ, 2023 ರಂದು ನವದೆಹಲಿಯಲ್ಲಿ ರಾಸಾಯನಿಕಗಳು ಮತ್ತು ಪೆಟ್ರೋಕೆಮಿಕಲ್ಸ್ ಕುರಿತು B20 ಅಂತರರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದೆ.

6

ಬೆಳೆ ಸಂರಕ್ಷಣೆಗಾಗಿ ಸಸ್ಯ ಶಾಸ್ತ್ರೀಯ ಕೀಟನಾಶಕಗಳ ಬಳಕೆ, ಸಮಗ್ರ ಕೀಟ ನಿರ್ವಹಣೆ, ಸಾವಯವ ಕೃಷಿ, ಉತ್ತಮ ಕೃಷಿ ಪದ್ಧತಿಗಳು, ಕೀಟಗಳ ನಿರ್ವಹಣೆಗೆ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳ ಬಳಕೆ ಮತ್ತು ಕೀಟನಾಶಕಗಳ ಸುರಕ್ಷಿತ ಮತ್ತು ವಿವೇಚನಾಯುಕ್ತ ಬಳಕೆಯ ಕುರಿತು ರೈತರಿಗೆ ಕಾರ್ಯಾಗಾರವನ್ನು, ಕೃಷಿ ಇಲಾಖೆಯ ಸಹಯೋಗದೊಂದಿಗೆ IPFT ಕರ್ನಾಟಕದಲ್ಲಿ ಬೀದರ್ ಜಿಲ್ಲೆಯ ಮೂರು ಗ್ರಾಮಗಳಲ್ಲಿ 20-09-2021 ರಿಂದ 22-09-2021 ರವರೆಗೆ ಆಯೋಜಿಸಿದೆ .

## B. ರಸಗೊಬ್ಬರ ಇಲಾಖೆ :



### 1. ರಸಗೊಬ್ಬರ ಕಾರ್ಖಾನೆಗಳ ಪುನರುಜ್ಜೀವನ

ರಾಮಗುಂಡಂ ಫರ್ಟಿಲೈಸರ್ ಮತ್ತು ಕೆಮಿಕಲ್ಸ್ ಲಿಮಿಟೆಡ್, ಹಿಂದೂಸ್ತಾನ್ ಉರ್ವರಕ್ ಮತ್ತು ರಸಾಯನ್ ಲಿಮಿಟೆಡ್ ಮತ್ತು ತಾಲ್ಚೆರ್ ಫರ್ಟಿಲೈಸರ್ಸ್ ಲಿಮಿಟೆಡ್ ಎಂಬ ಮೂರು ಜಂಟಿ ಸಹಭಾಗಿತ್ವದ ಕಂಪನಿಗಳು. ಪುನಶ್ಚೇತನಗೊಳ್ಳುತ್ತಿರುವ ಘಟಕಗಳು ರಾಮಗುಂಡಂ, ಬರೌನಿ, ಸಿಂದ್ರಿ, ಗೋರಖ್‌ಪುರ ಮತ್ತು ತಾಲ್ಚೆರ್‌ನಲ್ಲಿವೆ.

ರಾಮಗುಂಡಂ ಮತ್ತು ಗೋರಖ್‌ಪುರ ರಸಗೊಬ್ಬರ ಘಟಕವನ್ನು ಕ್ರಮವಾಗಿ 22.03.2021 ಮತ್ತು 07.12.2021 ರಂದು ಕಾರ್ಯಾರಂಭ ಮಾಡಲಾಗಿದೆ. ಉಳಿದ ಘಟಕಗಳು ಅಂದರೆ ಬರೌನಿ ಮತ್ತು ಸಿಂದ್ರಿ ಘಟಕಗಳು ಜೂನ್, 2022ರೊಳಗೆ ಮತ್ತು ತಾಲ್ಚರ್ ಘಟಕವು ಸೆಪ್ಟೆಂಬರ್, 2024 ರೊಳಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ. ಈ ಪ್ರತಿಯೊಂದು ಘಟಕಗಳು ವಾರ್ಷಿಕ 1.27 ಮಿಲಿಯನ್ MT ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದ್ದು, ಭಾರತವು ತನ್ನ ಯೂರಿಯಾ ರಸಗೊಬ್ಬರವನ್ನು ಪೂರೈಸುವಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಲು ಸಹಾಯ ಮಾಡುತ್ತದೆ.

2

ಅಂತಾರಾಷ್ಟ್ರೀಯ ಬೆಲೆಗಳ ಏರಿಕೆಯ ಹೊರತಾಗಿಯೂ ಪಿ & ಕೆ ರಸಗೊಬ್ಬರಗಳ ಬೆಲೆಗಳನ್ನು ಸಮಂಜಸವಾದ ಮಟ್ಟದಲ್ಲಿ ಇರಿಸಲಾಗಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಾದ ರಸಗೊಬ್ಬರ ಕಚ್ಚಾವಸ್ತುಗಳು/ಮಧ್ಯವರ್ತಿಗಳ ಹೆಚ್ಚಳವನ್ನು, ಸಬ್ಸಿಡಿಯನ್ನು ಹೆಚ್ಚಿಸುವ ಮೂಲಕ ತಗ್ಗಿಸಲಾಗಿದೆ, ಇದರಿಂದಾಗಿ ರೈತರಿಗೆ ಸಮಂಜಸವಾದ ಬೆಲೆಯಲ್ಲಿ ರಸಗೊಬ್ಬರಗಳ ಸಾಕಷ್ಟು ಲಭ್ಯತೆಯನ್ನು ಖಾತ್ರಿಪಡಿಸಲಾಗಿದೆ.

3

ಖರ್ಚು ಹಣಕಾಸು ಸಮಿತಿ (EFC) 02.08.2021 ರಂದು ನಡೆದ ತನ್ನ ಸಭೆಯಲ್ಲಿ ಪೌಷ್ಟಿಕಾಂಶ ಆಧಾರಿತ ಸಬ್ಸಿಡಿ (NBS) ಯೋಜನೆಯ ಮುಂದುವರಿಕೆಯನ್ನು ಪರಿಶೀಲಿಸಿತು ಮತ್ತು 2025–26 ರವರೆಗೆ ಅದರ ಮುಂದುವರಿಕೆಗೆ ಶಿಫಾರಸು ಮಾಡಿದೆ. 19.01.2022 ರಂದು ಕ್ಯಾಬಿನೆಟ್ ಸಹ ಇದಕ್ಕೆ ಅನುಮೋದನೆ ನೀಡಿದೆ.

4

01.03.2018 ರಂದು ಜೋರ್ಡಾನ್‌ನೊಂದಿಗೆ ರಾಕ್ ಫಾಸ್ಫೇಟ್, MOP ನ ಗಣಿಗಾರಿಕೆ ಮತ್ತು ಲಾಭಕ್ಕಾಗಿ ಮತ್ತು ಫಾಸ್ಪರಿಕ್ ಆಮ್ಲ / DAP / NPK ರಸಗೊಬ್ಬರಗಳಿಗೆ ಜೋರ್ಡಾನ್‌ನಲ್ಲಿ ಉತ್ಪಾದನಾ ಸೌಲಭ್ಯವನ್ನು ಸ್ಥಾಪಿಸಲು 01.03.2018 ರಂದು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಅದರ ನಂತರ, 13.05.2022 ರಿಂದ 15.05.2022 ರವರೆಗೆ ಗೌರವಾನ್ವಿತ ಸಚಿವರ (C&F) ಭೇಟಿಯ ನಂತರ ಜೋರ್ಡಾನ್‌ನಿಂದ ಹೆಚ್ಚುವರಿ ಪ್ರಮಾಣದಲ್ಲಿ ಖಾರಿಫ್–2022 ಕ್ಕೆ ರಸಗೊಬ್ಬರಗಳ ಲಭ್ಯತೆಗೆ ಕಾರಣವಾಗಿವೆ.

5

ನೇಪಾಳಕ್ಕೆ ರಸಗೊಬ್ಬರಗಳ ಪೂರೈಕೆಗಾಗಿ 28.02.2022 ರಂದು GoI ಮತ್ತು ನೇಪಾಳ ಸರ್ಕಾರದ ನಡುವೆ ತಿಳುವಳಿಕೆ ಪತ್ರ (MOU) ಗೆ ಸಹಿ ಹಾಕಲಾಗಿದೆ .

6

ಟಾಲ್ಚರ್ ಫರ್ಟಿಲೈಸರ್ಸ್ ಲಿಮಿಟೆಡ್ (TFL) ನಿಂದ ಕಲ್ಲಿದ್ದಲು ಅನಿಲೀಕರಣದ ಮೂಲಕ ಉತ್ಪಾದಿಸಲಾದ ಯೂರಿಯಾಕ್ಕೆ ವಿಶೇಷ ಸಬ್ಸಿಡಿ ನೀತಿ .





bhagwanthkhuba bhagwantkhuba

## C. ಫಾರ್ಮಾಸ್ಯುಟಿಕಲ್ಸ್ ಇಲಾಖೆ:

### 1. ಬಲ್ಕ್ ಡ್ರಗ್ಸ್‌ಗೆ ಪಿಎಲ್‌ಐ: ರೂ. 6,940 ಕೋಟಿ

ಎ. ನಿರೀಕ್ಷಿತ **ಉದ್ಯೋಗ ಸೃಷ್ಟಿ 10,598 ವ್ಯಕ್ತಿಗಳು.**

ಬಿ. ಪ್ಯಾರಾ-ಅಮಿನೊ ಫಿನಾಲ್ (ಪ್ಯಾರೆಸಿಟಮಾಲ್‌ನ ಪೂರ್ವಗಾಮಿ), ಅಟೊರ್ವಾಸ್ಟಾಟಿನ್, ವಲ್ಸಾರ್ಟನ್, ಲೆವೊಫ್ಲೋಕ್ಸಾಸಿನ್, ಲೋಪಿನಾವಿರ್, ಲೆವೆಟಿರಾಸೆಟಮ್, ಇತ್ಯಾದಿಗಳಂತಹ ಬಲ್ಕ್ ಡ್ರಗ್‌ಗಳ ತಯಾರಿಕೆಯನ್ನು **21 ಯೋಜನೆಗಳು** ಈಗಾಗಲೇ ಪ್ರಾರಂಭಿಸಿವೆ.

### 2. ವೈದ್ಯಕೀಯ ಸಾಧನಗಳಿಗೆ PLI : ರೂ. 3,420 ಕೋಟಿ

ಎ. ನಿರೀಕ್ಷಿತ **ಉದ್ಯೋಗ ಸೃಷ್ಟಿ 6,411 ವ್ಯಕ್ತಿಗಳು.**

ಬಿ. 13 ಪ್ರಾಜೆಕ್ಟ್‌ಗಳು ಕಾರ್ಯಾರಂಭ ಮಾಡಿದ್ದು ಉನ್ನತ ಮಟ್ಟದ ಸಾಧನಗಳನ್ನು ಒಳಗೊಂಡಂತೆ **29 ವೈದ್ಯಕೀಯ ಸಾಧನಗಳನ್ನು** ಉತ್ಪಾದಿಸುತ್ತವೆ.

### 3. PLI ಫಾರ್ಮಾಸ್ಯುಟಿಕಲ್ಸ್ : ರೂ. 15,000 ಕೋಟಿ

ಎ. ನಿರೀಕ್ಷಿತ **ಉದ್ಯೋಗ ಸೃಷ್ಟಿ 1,00,000 ವ್ಯಕ್ತಿಗಳು.**

ಬಿ. ರೂ.17,000 ಕೋಟಿ ಗೂ ಹೆಚ್ಚು ಹೂಡಿಕೆಯನ್ನು ತರುವ ನಿರೀಕ್ಷೆಯಿದೆ.

### 4. ವೈದ್ಯಕೀಯ ಸಾಧನಗಳ ಪಾರ್ಕ್ ಯೋಜನೆ : ರೂ. 400 ಕೋಟಿ

ಎ. ಮುಂದಿನ ಎರಡು ವರ್ಷಗಳಲ್ಲಿ, HP, UP, MP ಮತ್ತು TN ನಲ್ಲಿನ ವೈದ್ಯಕೀಯ ಸಾಧನಗಳ ಪಾರ್ಕ್‌ಗಳಲ್ಲಿ ವೈದ್ಯಕೀಯ ಸಾಧನಗಳ ತಯಾರಿಕೆಯ ದೊಡ್ಡ ಸಮೂಹ ರಚನೆ

ಬಿ. GoI ವಿಶ್ವ ದರ್ಜೆಯ ಸಾಮಾನ್ಯ ಮೂಲಸೌಕರ್ಯ ಸೌಲಭ್ಯಗಳ ಸೃಷ್ಟಿಗಾಗಿ ಪಾರ್ಕ್‌ಗಳಿಗೆ ತಲಾ **ರೂ.100 ಕೋಟಿ** ಅನುದಾನ

### 5. ಬಲ್ಕ್ ಡ್ರಗ್ ಪಾರ್ಕ್ ಯೋಜನೆ : ರೂ. 3,000 ಕೋಟಿ

ಎ. ಪಾರ್ಕ್‌ಗಳಲ್ಲಿ ಬಲ್ಕ್ ಡ್ರಗ್ಸ್ ತಯಾರಿಕೆಯ ದೊಡ್ಡ ಸಮೂಹಗಳನ್ನು ರಚಿಸಲಾಗುವುದು.

ಬಿ. HP, ಗುಜರಾತ್ ಮತ್ತು AP ಮೂರು ರಾಜ್ಯಗಳಿಗೆ ಅನುಮೋದನೆ ನೀಡಲಾಗಿದೆ.

# ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (PMBJP):




- ಎಲ್ಲರಿಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ಜೆನೆರಿಕ್ ಔಷಧಗಳು ಲಭಿಸುವಂತೆ ಮಾಡುವ ಉದ್ದೇಶದಿಂದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (PMBJP) ಅನ್ನು ಇಲಾಖೆಯು **ನವೆಂಬರ್, 2008 ರಲ್ಲಿ ಪ್ರಾರಂಭಿಸಿತು.**
- **9347** ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ದೇಶದ ಎಲ್ಲಾ ಜಿಲ್ಲೆಗಳಲ್ಲಿ ಕೇಂದ್ರಗಳನ್ನು ತೆರೆಯಲಾಗಿದೆ. PMBJP ಯ **1800 ಔಷಧಗಳು ಮತ್ತು 285 ಶಸ್ತ್ರಚಿಕಿತ್ಸಾ ಸಾಧನಗಳನ್ನು** ಒಳಗೊಂಡಿದೆ.

- ಕಳೆದ 8 ವರ್ಷಗಳಲ್ಲಿ, ಮಾರಾಟವು 150 ಪಟ್ಟು ಹೆಚ್ಚಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಮಾರಾಟದಲ್ಲಿ ಒಟ್ಟಾರೆ ಸುಮಾರು 30% ವಾರ್ಷಿಕ ಬೆಳವಣಿಗೆ ಆಗಿದೆ.
- ಯೋಜನೆಯನ್ನು ಹೆಚ್ಚು ಆಕರ್ಷಕವಾಗಿಸಲು ಕೇಂದ್ರದ ಮಾಲೀಕರಿಗೆ ನೀಡಲಾಗುವ ಪ್ರೋತ್ಸಾಹಧನವನ್ನು ಈಗಿರುವ **ರೂ. 2.50 ಲಕ್ಷದಿಂದ ರೂ. 5.00 ಲಕ್ಷ (ಗರಿಷ್ಠ @ ರೂ. ತಿಂಗಳಿಗೆ 15,000)** ಹೆಚ್ಚಿಸಲಾಗಿದೆ.
- ಇದಲ್ಲದೆ, ಮಹಿಳೆಯರು, ಎಸ್‌ಸಿ ಮತ್ತು ಎಸ್‌ಟಿ ಮತ್ತು ಮಹತ್ವಾಕಾಂಕ್ಷೆಯ ಜಿಲ್ಲೆಗಳು ಅಥವಾ ಈಶಾನ್ಯ ರಾಜ್ಯಗಳಲ್ಲಿ ಯಾವುದೇ ಉದ್ಯಮಿಗಳು ತೆರೆಯುವ ಅಂಗಡಿಗಳಿಗೆ ಒಂದು ಬಾರಿ ಪ್ರೋತ್ಸಾಹಕ **ರೂ. 2 ಲಕ್ಷವನ್ನು** ಕಂಪ್ಯೂಟರ್ ಮತ್ತು ಪೀಠೋಪಕರಣಗಳ ಖರೀದಿಗೆ ಅನುಮೋದಿಸಲಾಗಿದೆ .

| ವರ್ಷ | ಒಟ್ಟು ನಿಧಿಯನ್ನು ರೂ. ಕೋಟಿ | ಕೇಂದ್ರಗಳ ಸಂ | ಮಾರಾಟ ರೂ.ನಲ್ಲಿ ಕೋಟಿ | ಗ್ರಾಹಕರಿಗೆ ಉಳಿತಾಯ (ಅಂದಾಜು.) ರೂ. ಕೋಟಿ | ಔಷಧಗಳು ಮತ್ತು ಸಾಧನಗಳು |
|---|---|---|---|---|---|
| 2014–15 | 0 | 80 | – | 44 | 131 |
| 2015–16 | 16.91 | 269 | – | 73 | – |
| 2016–17 | 49.75 | 1080 | – | 196 | – |
| 2017–18 | 47.64 | 3306 | – | 845 | – |
| 2018–19 | 42.51 | 5140 | – | 1894 | – |
| 2019–20 | 35.51 | 6306 | 433.6 | 2600 | – |
| 2020–21 | 65.00 | 7557 | 665.8 | 3900 | – |
| 2021–22 | 68.50 | 8610 | 893.5 | 5300 | – |
| 2022–23 (30.04.2023 ರಂತೆ) | 72.50 | 9347 | 758+ | 4500+ | 1800 ಔಷಧಗಳು ಮತ್ತು 285 ಶಸ್ತ್ರಚಿಕಿತ್ಸಾ ಸಾಧನಗಳು |

# ಭಗವಂತ ಖೂಬಾ

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ
ಹಾಗೂ ಹೊಸ ಮತ್ತು ನವೀಕರಿಸಬಹುದಾದ
ಇಂಧನ ಮೂಲ ಖಾತೆ ಸಹ ಸಚಿವರು


H.No.19-1-243/3, ಬ್ಯಾಂಕರ್ ಕಾಲೋನಿ
ಶಿವನಗರ ದಕ್ಷಿಣ, ಬೀದರ್ - 585 401

7349475444 / 08482-225925

mpbidar@gmail.com
bhagwantkhuba
bhagwanthkhuba
bhagwantkhuba


